# ಸಮಾಜ ಕಲ್ಯಾಣ ಇಲಾಖೆ

# SOCIAL WELFARE DEPARTMENT

**ಕರ್ನಾಟಕ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013,**

**ಕಾಯ್ದೆ ಕಲಂ 26 ರಂತೆ**

**2022-23 ನೇ ಸಾಲಿನ ವಾರ್ಷಿಕ ವರದಿ.**

****

## The Karnataka Scheduled Caste Sub Allocation and Tribal Sub Allocation (Planning, Allocation and Utilization of Financial Resources) Act, 2013

## As per Section 26 of the above said Act

## The Annual Report of 2022-23

# ಪರಿವಿಡಿ


| ಕ್ರ.ಸಂ | ವಿವರ | ಪುಟ ಸಂಖ್ಯೆ |
|---|---|---|
| 1 | ಎಸ್.ಸಿಎಸ್.ಪಿ/ಟಿ.ಎಸ್.ಪಿ ಸಾಮಾನ್ಯ ಮಾಹಿತಿ ಮತ್ತು ಆಯವ್ಯಯ ವೆಚ್ಚ ಘೋಸ್ವಾರೆ | 1 |
| 2 | ಇಲಾಖೆವಾರು ಹಂಚಿಕೆ, ಬಿಡುಗಡೆ ಮತ್ತು ವೆಚ್ಚದ ವಿವರ | 2-3 |
| 3 | ಕೃಷಿ ಇಲಾಖೆ | 4 |
| 4 | ತೋಟಗಾರಿಕೆ ಇಲಾಖೆ | 5 |
| 5 | ರೇಷ್ಮೆ ಇಲಾಖೆ | 5 |
| 6 | ಪಶುಸಂಗೋಪನೆ ಇಲಾಖೆ | 6 |
| 7 | ಮೀನುಗಾರಿಕೆ ಇಲಾಖೆ | 6-7 |
| 8 | ಸಾರಿಗೆ ಇಲಾಖೆ | 7 |
| 9 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 7-8 |
| 10 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ | 8 |
| 11 | ಸಹಕಾರ ಇಲಾಖೆ | 8-9 |
| 12 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 9 |
| 13 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 9-10 |
| 14 | ವಾರ್ತಾ ಇಲಾಖೆ | 10 |
| 15 | ಪ್ರವಾಸೋದ್ಯಮ ಇಲಾಖೆ | 10 |
| 16 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 11 |
| 17 | ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ | 11 |
| 18 | ಕಂದಾಯ ಇಲಾಖೆ | 11-12 |
| 19 | ಐ.ಟಿ - ಬಿ.ಟಿ ಇಲಾಖೆ | 12 |
| 20 | ವಸತಿ ಇಲಾಖೆ | 12 |
| 21 | ಉನ್ನತ ಶಿಕ್ಷಣ ಇಲಾಖೆ | 13 |
| 22 | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | 13-14 |
| 23 | ಕೈಮಗ್ಗ ಮತ್ತು ಜವಳಿ ಇಲಾಖೆ | 14 |
| 24 | ಸಣ್ಣ ಕೈಗಾರಿಕೆ ಇಲಾಖೆ | 14 |
| 25 | ನಗರಾಭಿವೃದ್ಧಿ ಇಲಾಖೆ | 15 |
| 26 | ಲೋಕೋಪಯೋಗಿ ಇಲಾಖೆ | 15 |
| 27 | ಭಾರಿ ನೀರಾವರಿ ಇಲಾಖೆ | 15-16 |
| 28 | ಸಣ್ಣ ನೀರಾವರಿ ಇಲಾಖೆ | 16 |
| 29 | ವೈದ್ಯಕೀಯ ಶಿಕ್ಷಣ ಇಲಾಖೆ | 16-17 |
| 30 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 17 |
| 31 | ಕಾರ್ಮಿಕ ಇಲಾಖೆ | 17 |
| 32 | ಕೌಶಲ್ಯಾಭಿವೃದ್ಧಿ, ಉದ್ಯೋಗ ಮತ್ತು ತರಬೇತಿ ಇಲಾಖೆ | 18 |
| 33 | ಇಂಧನ ಇಲಾಖೆ | 18 |
| 34 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 19 |
| 35 | ಯೋಜನಾ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | 19 |
| 36 | ಸಮಾಜ ಕಲ್ಯಾಣ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | 19-24 |

# ಕರ್ನಾಟಕ ಸರ್ಕಾರ
## ಸಮಾಜ ಕಲ್ಯಾಣ ಇಲಾಖೆ
## ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಅನುಷ್ಠಾನದ ಬಗ್ಗೆ 2022-23ನೇ ಸಾಲಿನ ಆರ್ಥಿಕ ವರ್ಷದ ವಾರ್ಷಿಕ ವರದಿ

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ 2013, ದಿನಾಂಕ 20.03.2014ರ ಅನ್ವಯ ಸದರಿ ಕಾಯ್ದೆ ಜಾರಿಗೆ ಬಂದಿರುತ್ತದೆ. ಸದರಿ ಕಾಯ್ದೆ ಜಾರಿಗೆ ಬಂದ ನಂತರ ಒಟ್ಟು ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗದಿಪಡಿಸಿದ ಆಯವ್ಯಯದಿಂದ, ಪ.ಜಾತಿ ಮತ್ತು ಪ.ಪಂಗಡದ ಜನಸಂಖ್ಯೆ ಆಧಾರದ ಮೇಲೆ SCSP/TSP ಯೋಜನೆಗಳಿಗೆ ಅನುದಾನ ನಿಗದಿಪಡಿಸಲಾಗುತ್ತಿದೆ. 2011 ರ ಜನಗಣತಿಯಂತೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ (6.10 ಕೋಟಿ) ಪ.ಜಾತಿ ಜನಸಂಖ್ಯೆ ಶೇ.17.15 (1.04 ಕೋಟಿ) ಹಾಗೂ ಪ.ಪಂಗಡದ ಜನಸಂಖ್ಯೆ ಶೇ.6.95 (42.00 ಲಕ್ಷ) ಇರುತ್ತದೆ.

2017-18 ನೇ ಸಾಲಿನಿಂದ ಆಯವ್ಯಯದಲ್ಲಿ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳನ್ನು ಒಂದುಗೂಡಿಸಿ ಒಟ್ಟು ಆಯವ್ಯಯ ಎಂದು ಮಾರ್ಪಡಿಸಲಾಗಿದ್ದು, ಅದರಂತೆ ಮೇಲ್ಕಂಡ ಅಧಿನಿಯಮಕ್ಕೆ ದಿನಾಂಕ:17-07-2017 ರಂದು ಅಧಿಸೂಚನೆ ಮೂಲಕ ತಿದ್ದುಪಡಿಯನ್ನು ಜಾರಿಗೆ ತರಲಾಗಿದೆ. ಸದರಿ ತಿದ್ದುಪಡಿಯಂತೆ ಒಟ್ಟು ಆಯವ್ಯಯದಲ್ಲಿ ವಿನಾಯಿತಿಸಲಾದ ವೆಚ್ಚ ಅಂದರೆ ಹಿಂದಿನ ಯೋಜನೇತರ ವೆಚ್ಚವಾದ ಆಡಳಿತ ವೆಚ್ಚ, ಸರ್ಕಾರದ ಸಾಲದ ಬಡ್ಡಿ ಇತ್ಯಾದಿ ಹೊರತುಪಡಿಸಿ ಉಳಿದ ಅಭಿವೃದ್ಧಿ ಕಾರ್ಯಕ್ರಮಗಳ ಆಯವ್ಯಯದ ಮೊತ್ತದಲ್ಲಿ ಪ.ಜಾತಿ/ಪ.ಪಂಗಡದ ಜನಸಂಖ್ಯೆ ಆಧಾರದ ಮೇಲೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನ ಒದಗಿಸಲಾಗುತ್ತಿದೆ.

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು 2017 ಇದನ್ನು ಅಧಿಸೂಚನೆ ದಿನಾಂಕ:08-11-2017 ರಂದು ಜಾರಿಗೆ ತರಲಾಗಿದೆ.

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆಯ ಸೆಕ್ಷನ್ (5) ರ ಪ್ರಕಾರ ಸಮಾಜ ಕಲ್ಯಾಣ ಇಲಾಖೆ ನೋಡಲ್ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತದೆ. 2022-23 ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ವಿವಿಧ ಕಾರ್ಯಕ್ರಮಗಳಿಗೆ ಆಯಾ ಇಲಾಖೆಗಳು ಕ್ರಿಯಾ ಯೋಜನೆಗಳನ್ನು ರೂಪಿಸಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿರುವ ನೋಡಲ್ ಏಜೆನ್ಸಿಗೆ ಸಲ್ಲಿಸಿರುತ್ತಾರೆ. ಅದರಂತೆ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಿ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ರಾಜ್ಯ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿಗೆ ಶಿಫಾರಸ್ಸು ಮಾಡಲಾಗುತ್ತದೆ. ಅಂತಿಮವಾಗಿ ದಿನಾಂಕ: 20.05.2022 ರಂದು ಅಭಿವೃದ್ಧಿ ಇಲಾಖೆಗಳ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗಿದೆ. ಸದರಿ ಅನುಮೋದನೆಯಂತೆ ಕಾರ್ಯಕ್ರಮಗಳನ್ನು ಆಯಾ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗಿದೆ.

### 2022-23 ನೇ ಸಾಲಿನ SCSP/ TSP ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿಯ ವಿವರ

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ಹಂಚಿಕೆ | ಬಿಡುಗಡೆ | ಖರ್ಚು | ಹಂಚಿಕೆಗೆ ಶೇಕಡ | ಬಿಡುಗಡೆಗೆ ಶೇಕಡ |
|---|---|---|---|---|---|
| SCSP | 21795.56 | 21335.06 | 21276.56 | 98% | 99.73% |
| TSP | 8468.21 | 8105.13 | 8077.19 | 95% | 99.66% |
| **ಒಟ್ಟು** | 30263.77 | 29440.19 | 29353.76 | 97% | 99.71% |

## 2022-23 ನೇ ಸಾಲಿನ ಆಯವ್ಯಯದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಒದಗಿಸಿದ ಹಾಗೂ ವೆಚ್ಚಮಾಡಿದ ಅನುದಾನದ ವಿವರ

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಇಲಾಖೆ | ಎಸ್.ಸಿ.ಎಸ್.ಪಿ | | | | ಟಿ.ಎಸ್.ಪಿ | | | |
|---|---|---|---|---|---|---|---|---|---|
| | | ಹಂಚಿಕೆ | ಬಿಡುಗಡೆ | ವೆಚ್ಚ | ಬಿಡುಗಡೆಗೆ% | ಹಂಚಿಕೆ | ಬಿಡುಗಡೆ | ವೆಚ್ಚ | ಬಿಡುಗಡೆಗೆ % |
| 1 | ಕೃಷಿ | 730.83 | 661.59 | 660.35 | 99.81 | 316.12 | 287.87 | 283.72 | 98.56 |
| 2 | ಪಶುಸಂಗೋಪನೆ | 103.59 | 95.14 | 95.14 | 100.00 | 55.73 | 52.45 | 52.45 | 99.99 |
| 3 | ಹಿಂದುಳಿದ ವರ್ಗಗಳ ಕಲ್ಯಾಣ | 49.97 | 49.97 | 49.97 | 100.00 | 24.46 | 24.46 | 24.46 | 100.00 |
| 4 | ಸಹಕಾರ | 103.06 | 103.04 | 103.04 | 100.00 | 50.01 | 50.01 | 50.01 | 100.00 |
| 5 | ಇಂಧನ | 1924.39 | 1924.39 | 1924.39 | 100.00 | 667.30 | 667.30 | 667.30 | 100.00 |
| 6 | ಮೀನುಗಾರಿಕೆ | 10.63 | 10.46 | 10.46 | 100.00 | 3.80 | 3.80 | 3.80 | 100.00 |
| 7 | ಆಹಾರ ಮತ್ತು ನಾಗರಿಕ ಸರಬರಾಜು | 587.83 | 587.83 | 585.77 | 99.65 | 240.09 | 240.09 | 239.61 | 99.80 |
| 8 | ಅರಣ್ಯ | 22.77 | 9.28 | 8.86 | 95.54 | 9.62 | 6.10 | 5.99 | 98.28 |
| 9 | ಕೈಮಗ್ಗ ಮತ್ತು ಜವಳಿ | 70.34 | 70.34 | 70.34 | 100.00 | 12.43 | 12.43 | 12.43 | 100.00 |
| 10 | ಆರೋಗ್ಯ | 926.14 | 874.58 | 874.34 | 99.97 | 339.55 | 250.53 | 249.15 | 99.45 |
| 11 | ಉನ್ನತ ಶಿಕ್ಷಣ | 202.71 | 202.70 | 200.47 | 98.90 | 78.01 | 78.01 | 77.14 | 98.88 |
| 12 | ತೋಟಗಾರಿಕೆ | 165.54 | 163.04 | 162.63 | 99.75 | 73.25 | 73.24 | 72.84 | 99.45 |
| 13 | ವಸತಿ | 1492.88 | 1492.88 | 1492.88 | 100.00 | 253.53 | 253.53 | 253.53 | 100.00 |
| 14 | ವಾರ್ತಾ | 14.88 | 14.88 | 14.85 | 99.80 | 2.40 | 2.40 | 2.39 | 99.72 |
| 15 | ಐ.ಟಿ – ಬಿ.ಟಿ | 4.12 | 4.12 | 4.12 | 100.00 | 1.67 | 1.67 | 1.67 | 100.00 |
| 16 | ಕನ್ನಡ ಮತ್ತು ಸಂಸ್ಕೃತಿ | 16.32 | 16.32 | 14.88 | 91.13 | 4.46 | 4.46 | 4.08 | 91.46 |
| 17 | ಕಾರ್ಮಿಕ | 0.68 | 0.68 | 0.68 | 100.00 | 0.28 | 0.28 | 0.28 | 100.00 |
| 18 | ಭಾರಿ ನೀರಾವರಿ | 1450.60 | 1450.60 | 1450.60 | 100.00 | 809.00 | 809.00 | 809.00 | 100.00 |
| 19 | ವೈದ್ಯಕೀಯ ಶಿಕ್ಷಣ | 100.01 | 81.62 | 81.62 | 100.00 | 47.32 | 36.81 | 36.17 | 98.27 |
| 20 | ಸಣ್ಣ ನೀರಾವರಿ | 251.00 | 251.00 | 251.00 | 100.00 | 110.35 | 110.35 | 109.60 | 99.32 |
| 21 | ಯೋಜನಾ ಮತ್ತು ಸಾಂಖ್ಯಿಕ | 745.22 | 745.19 | 745.19 | 100.00 | 309.35 | 309.33 | 309.33 | 100.00 |
| 22 | ಲೋಕೋಪಯೋಗಿ | 561.15 | 560.43 | 546.67 | 97.54 | 270.84 | 270.79 | 266.56 | 98.44 |
| 23 | ಕಂದಾಯ | 2779.40 | 2779.40 | 2769.02 | 99.63 | 969.01 | 969.01 | 965.26 | 99.61 |
| 24 | ಆರ್.ಡಿ.ಪಿ.ಆರ್ | 2242.87 | 2221.62 | 2209.38 | 99.45 | 1001.01 | 958.96 | 955.66 | 99.66 |
| 25 | ಸಮಾಜ ಕಲ್ಯಾಣ | 4604.59 | 4425.40 | 4411.68 | 99.69 | 0.00 | 0.00 | 0.00 | 0.00 |
| 26 | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | 645.69 | 644.03 | 643.99 | 99.99 | 338.97 | 338.13 | 338.12 | 100.00 |
| 27 | ರೇಷ್ಮೆ | 15.11 | 15.11 | 14.84 | 98.23 | 6.91 | 6.91 | 6.82 | 98.58 |
| 28 | ಕೌಶಲ್ಯಾಭಿವೃದ್ಧಿ | 93.14 | 75.49 | 75.49 | 100.00 | 47.33 | 36.12 | 36.12 | 100.00 |
| 29 | ಸಣ್ಣ ಕೈಗಾರಿಕೆ | 267.03 | 266.99 | 266.99 | 100.00 | 44.45 | 44.43 | 44.43 | 100.00 |

| ಕ್ರ ಸಂ. | ಇಲಾಖೆ | ಎಸ್.ಸಿ.ಎಸ್.ಪಿ | | | | ಟಿ.ಎಸ್.ಪಿ | | | |
|---|---|---|---|---|---|---|---|---|---|
| | | ಹಂಚಿಕೆ | ಬಿಡುಗಡೆ | ವೆಚ್ಚ | ಬಿಡುಗಡೆಗೆ% | ಹಂಚಿಕೆ | ಬಿಡುಗಡೆ | ವೆಚ್ಚ | ಬಿಡುಗಡೆಗೆ % |
| 30 | ಪರಿಶಿಷ್ಟ ವರ್ಗಗಳ ಕಲ್ಯಾಣ | 0.00 | 0.00 | 0.00 | 0.00 | 1709.40 | 1585.24 | 1577.88 | 99.54 |
| 31 | ಪ್ರವಾಸೋದ್ಯಮ | 2.00 | 2.00 | 2.00 | 100.00 | 1.00 | 1.00 | 1.00 | 100.00 |
| 32 | ಸಾರಿಗೆ | 276.83 | 276.83 | 276.83 | 100.00 | 118.82 | 118.82 | 118.82 | 100.00 |
| 33 | ನಗರಾಭಿವೃದ್ಧಿ | 827.48 | 815.48 | 815.48 | 100.00 | 317.60 | 313.60 | 313.60 | 100.00 |
| 34 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 499.24 | 435.13 | 435.11 | 99.99 | 231.63 | 185.49 | 185.47 | 99.98 |
| 35 | ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ | 7.50 | 7.50 | 7.50 | 100.00 | 2.50 | 2.50 | 2.50 | 100.00 |
| **ಒಟ್ಟು** | | **21795.56** | **21335.06** | **21276.56** | **99.73** | **8468.20** | **8105.12** | **8077.19** | **99.66** |

| ಕ್ರ.ಸಂ | ವಿವರ | ಇಲಾಖೆಗಳು |
|---|---|---|
| 1 | ಶೇ.100 ರಷ್ಟು ವೆಚ್ಚ ಮಾಡಿದ ಇಲಾಖೆಗಳು | ಸಣ್ಣ ಕೈಗಾರಿಕೆ, ಯೋಜನಾ ಮತ್ತು ಸಾಂಖ್ಯಿಕ, ಹಿಂದುಳಿದ ವರ್ಗಗಳ ಕಲ್ಯಾಣ, ಇಂಧನ, ಕೈಮಗ್ಗ ಮತ್ತು ಜವಳಿ, ಸಹಕಾರ, ಮೀನುಗಾರಿಕೆ, ವಸತಿ, ಐ.ಟಿ&ಬಿ.ಟಿ, ಕಾರ್ಮಿಕ, ಭಾರಿ ನೀರಾವರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ, ಕೌಶಲ್ಯಾಭಿವೃದ್ಧಿ, ಪ್ರವಾಸೋದ್ಯಮ, ಸಾರಿಗೆ, ನಗರಾಭಿವೃದ್ಧಿ, ಮತ್ತು ಯುವಜನ ಸೇವೆಗಳು, ಪಶು ಸಂಗೋಪನೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. |
| 2 | ಶೇ.90 ರಿಂದ ಶೇ.99 ರವರೆಗೆ ವೆಚ್ಚ ಮಾಡಿದ ಇಲಾಖೆಗಳು | ಕೃಷಿ, ಆಹಾರ ಮತ್ತು ನಾಗರಿಕ ಸರಬರಾಜು, ಅರಣ್ಯ, ಆರೋಗ್ಯ, ಉನ್ನತ ಶಿಕ್ಷಣ, ತೋಟಗಾರಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಕನ್ನಡ ಮತ್ತು ಸಂಸ್ಕೃತಿ, ವೈದ್ಯಕೀಯ ಶಿಕ್ಷಣ, ಸಣ್ಣ ನೀರಾವರಿ, ಲೋಕೋಪಯೋಗಿ, ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸಮಾಜ ಕಲ್ಯಾಣ, ರೇಷ್ಮೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ. |

ಮೇಲ್ಕಂಡ ಕಾಯ್ದೆಯಡಿಯಲ್ಲಿ SCSP/TSP ಯೋಜನೆಯಡಿಯಲ್ಲಿ ಬಿಡುಗಡೆಯಾಗಿ ವೆಚ್ಚವಾಗದೇ ಇರುವ ಮೊತ್ತವನ್ನು ಆಡಿಟ್ ಮಾಡಿಸಿದ ನಂತರ ಮುಂದಿನ ಆರ್ಥಿಕ ವರ್ಷದ ತದನಂತರದಲ್ಲಿ ಬರುವ ಆರ್ಥಿಕ ವರ್ಷದಲ್ಲಿ ನೀಡಲಾಗುತ್ತದೆ. ಅದರಂತೆ ಆಡಿಟ್ ಆದ ನಂತರ 2020-21ನೇ ಸಾಲಿನಲ್ಲಿ ನಿಖರ ವೆಚ್ಚವಾಗದೇ ಇರುವ ಮೊತ್ತ ರೂ.393.69 ಕೋಟಿಗಳನ್ನು 2022-23 ನೇ ಸಾಲಿನ ಆಯವ್ಯಯದಲ್ಲಿ ಆಯಾ ಇಲಾಖೆಗಳಿಗೆ 2/3 ಭಾಗ ಮತ್ತು ಸಮಾಜ ಕಲ್ಯಾಣ ಇಲಾಖೆಗೆ 1/3 ಭಾಗ ಮರು ಹಂಚಿಕೆ ಮಾಡಲಾಗಿದೆ.

# 2022-23 ನೇ ಸಾಲಿನಲ್ಲಿ ರಾಜ್ಯ ಪರಿಷತ್ತಿನ ನಿರ್ಣಯದಂತೆ ಇಲಾಖಾವಾರು ಅನುಷ್ಠಾನ ಮಾಡಿರುವ ಪ್ರಮುಖ ಕಾರ್ಯಕ್ರಮಗಳ ವಿವರ

**ಕೃಷಿ ಇಲಾಖೆ :**

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 730.83 | 661.59 | 660.35 | 90 | 99.81 |
| ಟಿ.ಎಸ್.ಪಿ | 316.12 | 287.87 | 283.72 | 90 | 98.56 |
| ಒಟ್ಟು | 1046.95 | 949.46 | 944.07 | 90 | 99.43 |

- ಒಟ್ಟಾರೆ ಕೃಷಿ ಇಲಾಖೆಯಲ್ಲಿ ಶೇ.99.43 ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಬಿತ್ತನೆ ಬೀಜ ವಿತರಣೆ, ಕೃಷಿ ಉಪಕರಣಗಳು/ ಸಾವಯವ/ ಬಯೋ ಗೊಬ್ಬರ, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳು ಇತ್ಯಾದಿ ಸೌಲಭ್ಯಗಳನ್ನು ಶೇಕಡ 90ರ ಸಹಾಯಧನದಲ್ಲಿ ನೀಡಲಾಗಿದೆ. ಪ.ಜಾತಿಯ 7.06 ಲಕ್ಷ ಹಾಗೂ ಪ.ಪಂಗಡದ 3.13 ಲಕ್ಷ ಫಲಾನುಭವಿಗಳಿಗೆ ರೂ.196.25 ಕೋಟಿ ವೆಚ್ಚ ಮಾಡಲಾಗಿದೆ.
- ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಪ.ಜಾತಿಯ 1.42 ಲಕ್ಷ ಹಾಗೂ ಪ.ಪಂಗಡದ 1.15 ಲಕ್ಷ ಫಲಾನುಭವಿಗಳಿಗೆ ರೂ.376.90 ಕೋಟಿ ವೆಚ್ಚ ಮಾಡಲಾಗಿದೆ.
- ಪ್ರಧಾನ ಮಂತ್ರಿ ಕೃಷಿ ಸಮ್ಮಾನ್ ಯೋಜನೆಯಡಿ ಪ.ಜಾತಿಯ 4.07 ಲಕ್ಷ ಹಾಗೂ ಪ.ಪಂಗಡದ 2.47 ಲಕ್ಷ ಫಲಾನುಭವಿಗಳಿಗೆ ರೂ.129.73 ಕೋಟಿ ಅನುದಾನದಲ್ಲಿ ಪ್ರೋತ್ಸಾಹಧನ ನೀಡಲಾಗಿದೆ.
- ರಾಷ್ಟ್ರೀಯ ಆಹಾರ ಸುರಕ್ಷತೆ ಮಿಷನ್ ಯೋಜನೆಯಡಿ ರೂ.41.45 ಕೋಟಿ ವೆಚ್ಚದಲ್ಲಿ ಪ.ಜಾತಿಯ 4.54 ಲಕ್ಷ ಹಾಗೂ ಪ.ಪಂಗಡದ 1.92 ಲಕ್ಷ ರೈತರಿಗೆ ಸೌಲಭ್ಯ ಒದಗಿಸಲಾಗಿದೆ.
- ಕೃಷಿ ಯಾಂತ್ರೀಕರಣ ಉಪ ಅಭಿಯಾನದಡಿ ರೂ.67.82 ಕೋಟಿ ವೆಚ್ಚದಲ್ಲಿ ಪ.ಜಾತಿಯ 19694 ಹಾಗೂ ಪ.ಪಂಗಡದ 11755 ರೈತರಿಗೆ ಸೌಲಭ್ಯ ಒದಗಿಸಲಾಗಿದೆ.
- ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಪುಸ್ತಕಗಳು, ಶುಲ್ಕ ಮರುಪಾವತಿ ಮತ್ತು ವಿದ್ಯಾರ್ಥಿವೇತನ ಸೌಲಭ್ಯ ನೀಡಲಾಗಿದೆ.
- ಜಲಾನಯನ ಇಲಾಖೆಯಿಂದ ಜಲಾನಯನ ಅಭಿವೃದ್ಧಿ ಯೋಜನೆಯಡಿ ನಿರ್ದಿಷ್ಟ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜಮೀನುಗಳ ಅಭಿವೃದ್ಧಿ ಮಾಡಿ, ಮಣ್ಣಿನ ತೇವಾಂಶ ಹೆಚ್ಚಿಸುವ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಲಾಗಿದೆ. ಎಸ್.ಸಿ.ಎಸ್.ಪಿ ಅಡಿ – 7728, ಟಿ.ಎಸ್.ಪಿ ಅಡಿ- 3,046 ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗಿದೆ.
- ಉಚಿತವಾಗಿ ಎಸ್.ಸಿ./ಎಸ್.ಟಿ. ರೈತರಿಗೆ ತರಬೇತಿ ಮತ್ತು ಪ್ರಾಯೋಗಿಕ ತಾಕುಗಳಲ್ಲಿ ಬೆಳೆ ಬೆಳೆಯುವ ಸೌಲಭ್ಯ ನೀಡಲಾಗಿದೆ.

ಕೃಷಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 17.59 ಲಕ್ಷ ಮತ್ತು ಪರಿಶಿಷ್ಟ ಪಂಗಡದ 8.93 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ತೋಟಗಾರಿಕೆ ಇಲಾಖೆ:**

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 165.54 | 163.04 | 162.63 | 98 | 99.75 |
| ಟಿ.ಎಸ್.ಪಿ | 73.25 | 73.24 | 72.84 | 99 | 99.45 |
| ಒಟ್ಟು | 238.79 | 236.28 | 235.47 | 99 | 99.66 |

- ಒಟ್ಟು ಶೇ.99.66 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ರೂ.30.86 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿಯ 5164 ಮತ್ತು ಪರಿಶಿಷ್ಟ ವರ್ಗದ 2144 ರೈತರಿಗೆ ತೋಟಗಾರಿಕೆ ಕಾರ್ಯಕ್ರಮಗಳಿಗೆ ಶೇ.90 ರಷ್ಟು ಸಹಾಯಧನ ನೀಡಲಾಗಿದೆ.
- ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ರೂ.182.23 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿಯ 5657 ಮತ್ತು ಪರಿಶಿಷ್ಟ ವರ್ಗದ 4106 ರೈತರಿಗೆ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ನೀಡಲಾಗಿದೆ.
- ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮದಡಿ ರೂ.14.28 ಕೋಟಿ ವೆಚ್ಚದಲ್ಲಿ ಹೊಸ ಪ್ರದೇಶ ವಿಸ್ತರಣೆ, ನಿರ್ವಹಣೆ, ಕೊಯ್ಲೋತ್ತರ ನಿರ್ವಹಣೆ ಘಟಕ, ನೀರು ಸಂಗ್ರಹಣಾ ಘಟಕ ಮತ್ತು ಇತರೆ ಘಟಕಗಳಡಿ ಶೇ.90ರಷ್ಟು ಸಹಾಯಧನ ನೀಡಲಾಗಿದೆ. ಪರಿಶಿಷ್ಟ ಜಾತಿಯ 581 ಮತ್ತು ಪರಿಶಿಷ್ಟ ವರ್ಗದ 336 ರೈತರಿಗೆ ಸೌಲಭ್ಯ ಒದಗಿಸಲಾಗಿದೆ.
- ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ಪರಿಶಿಷ್ಟ ಜಾತಿಯ 408 ಮತ್ತು ಪರಿಶಿಷ್ಟ ವರ್ಗದ 159 ರೈತರಿಗೆ ಸೌಲಭ್ಯ ಒದಗಿಸಲಾಗಿದೆ.

ತೋಟಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 12416 ಮತ್ತು ಪರಿಶಿಷ್ಟ ಪಂಗಡದ 7504 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ರೇಷ್ಮೆ ಇಲಾಖೆ :**

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 15.11 | 15.11 | 14.84 | 98 | 98.23 |
| ಟಿ.ಎಸ್.ಪಿ | 6.91 | 6.91 | 6.82 | 99 | 98.58 |
| ಒಟ್ಟು | 22.02 | 22.02 | 21.66 | 98 | 98.34 |

- ಒಟ್ಟು ಶೇ.98.34 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ರೇಷ್ಮೆ ಅಭಿವೃದ್ಧಿ ಕಾರ್ಯಕ್ರಮದಡಿ ರೂ.21.66 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿಯ 6298 ಮತ್ತು ಪರಿಶಿಷ್ಟ ವರ್ಗದ 3998 ರೈತರಿಗೆ ಸಹಾಯಧನ ನೀಡಲಾಗಿದೆ. ರೇಷ್ಮೆ ಬೆಳೆಗಾರರಿಗೆ ರೀಲಿಂಗ್ ಶೆಡ್, ಮಲ್ಟಿ ಎಂಡ್ ರೀಲಿಂಗ್ ಘಟಕ, ಜನರೇಟರ್, ಸೋಲಾರ್ ವಾಟರ್ ಹೀಟರ್, ಬಾಯ್ಲರ್, ಸೋಲಾರ್ ಪವರ್ ಜನರೇಟರ್ ಇತ್ಯಾದಿ ಸೌಲಭ್ಯಗಳನ್ನು ನೀಡಲಾಗಿದೆ.

ರೇಷ್ಮೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 6298 ಮತ್ತು ಪರಿಶಿಷ್ಟ ಪಂಗಡದ 3998 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ಪಶು ಸಂಗೋಪನಾ ಇಲಾಖೆ :**

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 103.59 | 95.14 | 95.14 | 92 | 100 |
| ಟಿ.ಎಸ್.ಪಿ | 55.73 | 52.45 | 52.45 | 94 | 99.99 |
| ಒಟ್ಟು | 159.32 | 147.59 | 147.59 | 93 | 100 |

- ಒಟ್ಟು ಶೇ.100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸದಸ್ಯರು ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಪೂರೈಕೆ ಮಾಡುವ ಹಾಲಿಗೆ ಕೆ.ಎಂ.ಎಫ್. ಮೂಲಕ ಪ್ರತಿ ಲೀಟರ್‌ಗೆ ರೂ.5/- ಪ್ರೋತ್ಸಾಹಧನ ನೀಡಲು ರೂ.138.51 ಕೋಟಿ ವೆಚ್ಚ ಭರಿಸಲಾಗಿದೆ. ಪರಿಶಿಷ್ಟ ಜಾತಿಯ 70,203 ಮತ್ತು ಪರಿಶಿಷ್ಟ ವರ್ಗದ 37,888 ಫಲಾನುಭವಿಗಳಿಗೆ ಪ್ರೋತ್ಸಾಹಧನ ನೀಡಲಾಗಿದೆ.
- ಕುರಿ/ ಮೇಕೆ ಸಾಕಾಣಿಕೆಗೆ ಶೇ. 90 ರಷ್ಟು ಸಹಾಯಧನ ನೀಡಲಾಗಿದ್ದು ಪರಿಶಿಷ್ಟ ಜಾತಿಯ 254 ಮತ್ತು ಪರಿಶಿಷ್ಟ ವರ್ಗದ 103 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲಾಗಿದೆ.
- ಜಾನುವಾರುಗಳಿಗೆ ರೋಗನಿರೋಧಕ ಲಸಿಕೆಗಳು ಹಾಗೂ ಪಶು ವೈದ್ಯಕೀಯ ವೆಚ್ಚ ಭರಿಸಲಾಗಿದೆ.
- ಬೀದರ್ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಮೂಲಕ ರಾಜ್ಯದಲ್ಲಿ ಪಶು ವೈದ್ಯಕೀಯ ವಿಜ್ಞಾನ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗಿದೆ. ಪರಿಶಿಷ್ಟ ಜಾತಿಯ 306 ಮತ್ತು ಪರಿಶಿಷ್ಟ ವರ್ಗದ 73 ವಿದ್ಯಾರ್ಥಿಗಳಿಗೆ ಸೌಲಭ್ಯ ಒದಗಿಸಲಾಗಿದೆ.

ಪಶುಸಂಗೋಪನೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 71,165 ಮತ್ತು ಪರಿಶಿಷ್ಟ ಪಂಗಡದ 38,990 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ಮೀನುಗಾರಿಕೆ ಇಲಾಖೆ :**

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 10.63 | 10.46 | 10.46 | 98 | 100 |
| ಟಿ.ಎಸ್.ಪಿ | 3.80 | 3.80 | 3.80 | 100 | 100 |
| ಒಟ್ಟು | 14.43 | 14.26 | 14.26 | 99 | 100 |

- ಒಟ್ಟು ಶೇ.100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಜಲಾಶಯದಲ್ಲಿ ಮೀನು ಮರಿ ಬಿತ್ತನೆ, ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ, ಮೀನುಕೊಳ ನಿರ್ಮಾಣ, ಮೀನು ಸಾಕಾಣಿಕೆ ಸಹಾಯಧನ ಮೀನುಮರಿ ಪಾಲನೆಗೆ ಮೂಲಭೂತ ಸೌಲಭ್ಯ, ಮೀನು ಸಾಗಾಣಿಕೆ ವಾಹನ ಖರೀದಿಗೆ ಸಹಾಯಧನ, ಮೀನುಗಾರಿಕೆ ಸಲಕರಣೆ ಖರೀದಿಗೆ ಶೇ.80 ರಿಂದ 100ರಷ್ಟು ಸಹಾಯಧನ ನೀಡಲಾಗಿದೆ.
- ನೀಲಿ ಕ್ರಾಂತಿ ಯೋಜನೆಯಡಿ ಪರಿಶಿಷ್ಟ ಜಾತಿಯ 114 ಹಾಗೂ ಪ.ಪಂಗಡದ 66 ಮೀನುಗಾರರಿಗೆ ರೂ.12.28 ಕೋಟಿ ವೆಚ್ಚದಲ್ಲಿ ಸೌಲಭ್ಯ ಒದಗಿಸಲಾಗಿದೆ.

- ಸಾಂಪ್ರದಾಯಿಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ 24 ದೋಣಿಗಳಿಗೆ ಸೀಮೆಎಣ್ಣೆ ವಿತರಿಸಲಾಗಿದೆ.
- ಒಳನಾಡು ಮೀನುಗಾರಿಕೆ ಅಡಿ ಪರಿಶಿಷ್ಟ ಜಾತಿಯ 750 ಹಾಗೂ ಪ.ಪಂಗಡದ 300 ಮೀನುಗಾರರಿಗೆ ಸೌಲಭ್ಯ ಒದಗಿಸಲಾಗಿದೆ.

ಮೀನುಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 882 ಮತ್ತು ಪರಿಶಿಷ್ಟ ಪಂಗಡದ 382 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಸಾರಿಗೆ ಇಲಾಖೆ :

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 276.83 | 276.83 | 276.83 | 100 | 100 |
| ಟಿ.ಎಸ್.ಪಿ | 118.82 | 118.82 | 118.82 | 100 | 100 |
| ಒಟ್ಟು | 395.64 | 395.64 | 395.64 | 100 | 100 |

- ಒಟ್ಟು ಶೇ.100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪ.ಜಾತಿಯ 3.54 ಲಕ್ಷ ಹಾಗೂ ಪ.ಪಂಗಡದ 1.69 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಕರ್ಯ ಕಲ್ಪಿಸಲಾಗಿದೆ.
- ಪ.ಜಾತಿಯ 1,273 ಮತ್ತು ಪ.ಪಂಗಡದ 275 ಅಭ್ಯರ್ಥಿಗಳಿಗೆ ಚಾಲನಾ ತರಬೇತಿಯನ್ನು ನೀಡಲಾಗಿದೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ :

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 2242.87 | 2221.62 | 2209.38 | 99 | 99.45 |
| ಟಿ.ಎಸ್.ಪಿ | 1001.01 | 958.96 | 955.66 | 95 | 99.66 |
| ಒಟ್ಟು | 3243.88 | 3180.58 | 3165.05 | 98 | 99.51 |

- ಒಟ್ಟು ಶೇ.99.51 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪ.ಪಂಗಡದ ಕುಟುಂಬಗಳಿಗೆ ಸ್ವಚ್ಛ ಭಾರತ ಅಭಿಯಾನದಡಿ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯ/ಸ್ನಾನಗೃಹ ನಿರ್ಮಾಣಕ್ಕೆ ಸಹಾಯಧನ ರೂ.15,000/- ಗಳನ್ನು ನೀಡಲಾಗುತ್ತಿದೆ. ರೂ.82.30 ಕೋಟಿ ವೆಚ್ಚ ಭರಿಸಲಾಗಿದೆ.
- ನಮ್ಮ ಗ್ರಾಮ ನಮ್ಮ ರಸ್ತೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಮತ್ತು ಇತರೆ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ಹೆಚ್ಚಿರುವ ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಿಸಲಾಗಿದೆ.
- ಗ್ರಾಮೀಣ ನೀರು ಸರಬರಾಜು ಯೋಜನೆಯಡಿ (ಜಲಧಾರೆ/ಜಲಜೀವನ್ ಅಭಿಯಾನ) ಎಸ್.ಸಿ.ಎಸ್.ಪಿ ಅಡಿ 2.60 ಲಕ್ಷ ಹಾಗೂ ಟಿ.ಎಸ್.ಪಿ ಅಡಿ 1.60 ಲಕ್ಷ ಪ.ಜಾತಿ/ಪ.ಪಂಗಡದ ಕುಟುಂಬಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸಲಾಗಿದೆ.

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ರೂ.308.48 ಕೋಟಿ ವೆಚ್ಚ ಮಾಡಲಾಗಿದೆ.

  ಒಟ್ಟು 5.01 ಲಕ್ಷ ಪರಿಶಿಷ್ಟ ಜಾತಿ ಕುಟುಂಬಗಳಿಗೆ 3.10 ಲಕ್ಷ ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ. ಒಟ್ಟು ಪರಿಶಿಷ್ಟ ಜಾತಿಯವರಿಗೆ 2.06 ಕೋಟಿ ಮಾನವ ದಿನಗಳ ಕೆಲಸ ಮತ್ತು ಪರಿಶಿಷ್ಟ ಪಂಗಡದವರಿಗೆ 1.43 ಕೋಟಿ ಮಾನವ ದಿನಗಳ ಕೆಲಸ ನೀಡಲಾಗಿದೆ.

**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ:**

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 22.77 | 9.28 | 8.86 | 39 | 95.54 |
| ಟಿ.ಎಸ್.ಪಿ | 9.62 | 6.10 | 5.99 | 62 | 98.28 |
| ಒಟ್ಟು | 32.40 | 15.37 | 14.85 | 46 | 96.63 |

- ಒಟ್ಟು ಶೇ.96.63 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿಯ 3324 ಮತ್ತು ಪ.ಪಂಗಡದ 3111 ಅರಣ್ಯ ವಾಸಿಗಳ ಸಿಲಿಂಡರ್‌ಗಳಿಗೆ ರೀ-ಫಿಲ್ಲಿಂಗ್ ಮಾಡಲಾಗಿದೆ.
- ಪರಿಶಿಷ್ಟ ಜಾತಿಯ 400 ಮತ್ತು ಪ.ಪಂಗಡದ 205 ಫಲಾನುಭವಿಗಳಿಗೆ ಉಚಿತ ಬಿದಿರು ವಿತರಣೆ ಮಾಡಲಾಗಿದೆ.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 4527 ಮತ್ತು ಪರಿಶಿಷ್ಟ ಪಂಗಡದ 3961 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ಸಹಕಾರ ಇಲಾಖೆ:**

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 103.06 | 103.04 | 103.04 | 100 | 100 |
| ಟಿ.ಎಸ್.ಪಿ | 50.01 | 50.01 | 50.01 | 100 | 100 |
| ಒಟ್ಟು | 153.07 | 153.05 | 153.05 | 100 | 100 |

- ಒಟ್ಟು ಶೇ.100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ರೈತರು ಪಡೆದ ಕೃಷಿ ಸಾಲಕ್ಕೆ ಬಡ್ಡಿ ಸಹಾಯಧನ ಕಾರ್ಯಕ್ರಮದಡಿ ರೂ.125 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿಯ 2.18 ಲಕ್ಷ ಮತ್ತು ಪರಿಶಿಷ್ಟ ಪಂಗಡದ 2.13 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಸಹಕಾರ ಸಂಘಗಳಲ್ಲಿ ಸದಸ್ಯತ್ವ ನೋಂದಣಿ ಯೋಜನೆಯಡಿ ಪರಿಶಿಷ್ಟ ಜಾತಿಯ 5289 ಮತ್ತು ಪರಿಶಿಷ್ಟ ಪಂಗಡದ 1351 ಜನರನ್ನು ಸದಸ್ಯರನ್ನಾಗಿ ನೋಂದಾಯಿಸಲಾಗಿದೆ.

- ಪರಿಶಿಷ್ಟ ಪಂಗಡ ಉಪಯೋಜನೆಯಡಿ ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಆರ್ಥಿಕ ಸೌಲಭ್ಯ ನೀಡಲಾಗುತ್ತದೆ. ಸದರಿ ಯೋಜನೆಯಡಿ 6 ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ರೂ.2.00 ಕೋಟಿ ಧನಸಹಾಯ ನೀಡಲಾಗಿದೆ.
- ಯಶಸ್ವಿನಿ ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 76 ಫಲಾನುಭವಿಗಳಿಗೆ ರೂ.24.10 ಕೋಟಿ ವೆಚ್ಚ ಭರಿಸಲಾಗಿದೆ.

ಸಹಕಾರ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 2.25 ಲಕ್ಷ ಮತ್ತು ಪರಿಶಿಷ್ಟ ಪಂಗಡದ 2.14 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 49.97 | 49.97 | 49.97 | 100 | 100 |
| ಟಿ.ಎಸ್.ಪಿ | 24.46 | 24.46 | 24.46 | 100 | 100 |
| ಒಟ್ಟು | 74.42 | 74.42 | 74.42 | 100 | 100 |

- ಒಟ್ಟು ಶೇ.100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಶೇ.25 ರಷ್ಟು ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಒಟ್ಟು ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡದ 67404 ವಿದ್ಯಾರ್ಥಿಗಳಿಗೆ ಸೌಲಭ್ಯ ಒದಗಿಸಲಾಗಿದೆ.
- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಇರುವ ಹಿಂದುಳಿದ ವರ್ಗಗಳ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ನೀಡಲಾಗಿದೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 499.24 | 435.13 | 435.11 | 87.15 | 100 |
| ಟಿ.ಎಸ್.ಪಿ | 231.63 | 185.49 | 185.47 | 80.07 | 99.99 |
| ಒಟ್ಟು | 730.87 | 620.62 | 620.58 | 85.91 | 99.99 |

- ಒಟ್ಟು ಶೇ.99.99 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯಡಿ ಪರಿಶಿಷ್ಟ ಜಾತಿಯ 40,415 ಪರಿಶಿಷ್ಟ ಪಂಗಡದ 14,024 ಮಹಿಳೆಯರಿಗೆ ಧನಸಹಾಯ ನೀಡಲಾಗಿದೆ.
- ಉದ್ಯೋಗಿನಿ ಯೋಜನೆಯಡಿ ಪರಿಶಿಷ್ಟ ಜಾತಿಯ 132 ಮತ್ತು ಪ.ಪಂಗಡದ 132 ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ಒದಗಿಸಲಾಗಿದೆ.
- ಅಂಗವಿಕಲರಿಗೆ ವಿದ್ಯಾರ್ಥಿ ವೇತನ, ಸಲಕರಣೆ ವಿತರಣೆ, ಸ್ವಯಂ ಸೇವಾ ಸಂಸ್ಥೆಯ ಮೂಲಕ ತರಬೇತಿ, ನಿರುದ್ಯೋಗ ಭತ್ಯೆ ಹಾಗೂ ದೈಹಿಕ ಮತ್ತು ಮಾನಸಿಕವಾಗಿ ಸವಾಲುಗಳಿಗೆ ಒಳಗಾದವರಿಗೆ ಸೌಲಭ್ಯ

ನೀಡುತ್ತಿದ್ದು, ಪರಿಶಿಷ್ಟ ಜಾತಿಯ 1883 ಮತ್ತು ಪ.ಪಂಗಡದ 858 ವಿಕಲಚೇತನರಿಗೆ ಧನ ಸಹಾಯ ನೀಡಲಾಗಿದೆ.

- ಭಾಗ್ಯಲಕ್ಷ್ಮಿ ಯೋಜನೆಯಡಿ ರೂ.43.00 ಕೋಟಿ ವೆಚ್ಚದಲ್ಲಿ ಪ.ಜಾತಿಯ 1.03 ಲಕ್ಷ ಹಾಗೂ ಪ.ಪಂಗಡದ 40,000 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಸಮಗ್ರ ಮಕ್ಕಳ ಅಭಿವೃದ್ಧಿ (Integrated Child Development Service)(SNP) ಯೋಜನೆಯಡಿಯಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ (ಮಾತೃಪೂರ್ಣ, ಕ್ಷೀರಭಾಗ್ಯ, ಸೃಷ್ಟಿ) ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಔಷಧೋಪಚಾರ, ಚಿಕಿತ್ಸೆ, ಪೌಷ್ಠಿಕ ಆಹಾರಕ್ಕಾಗಿ ಪ.ಜಾತಿಯ 14.58 ಲಕ್ಷ ಹಾಗೂ ಪ.ಪಂಗಡದ 6.47 ಲಕ್ಷ ಮಕ್ಕಳಿಗೆ ಸೌಲಭ್ಯ ನೀಡಲಾಗಿದೆ.
- ಸ್ತ್ರೀ ಶಕ್ತಿ ಯೋಜನೆಯಡಿ ಪ.ಜಾತಿಯ 278 ಹಾಗೂ ಪ.ಪಂಗಡದ 690 ಮಹಿಳಾ ಸ್ವಸಹಾಯ ಸಂಘಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಚೇತನ ಹಾಗೂ ಗುರುತಿಸಲ್ಪಟ್ಟ ದೇವದಾಸಿ ಮಹಿಳೆಯರ ಪುನರ್ವಸತಿ ಕಾರ್ಯಕ್ರಮದಡಿ 326 ಲೈಂಗಿಕ ಕಾರ್ಯಕರ್ತೆಯರಿಗೆ ಸ್ವಯಂ ಉದ್ಯೋಗದ ಮೂಲಕ ಸ್ವಾವಲಂಬನೆಯ ಜೀವನ ನಡೆಸಲು ಅನುಕೂಲವಾಗುವಂತೆ ಸಹಾಯಧನ ಒದಗಿಸಲಾಗಿದೆ. ದೇವದಾಸಿಯರ ವಸತಿ ನಿರ್ಮಾಣಕ್ಕೆ ಗ್ರಾಮೀಣ ಪ್ರದೇಶದಲ್ಲಿ ಘಟಕ ವೆಚ್ಚ ರೂ.1.75 ಲಕ್ಷ ಮತ್ತು ನಗರ ಪ್ರದೇಶಗಳಲ್ಲಿ 2.00 ಲಕ್ಷ ನೀಡಲಾಗುತ್ತಿದೆ.
- ಪ.ಜಾತಿ/ಪ.ಪಂಗಡದ ಕಾಲೋನಿಗಳಲ್ಲಿರುವ 58 ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಕ್ರಮವಹಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ 16.12 ಲಕ್ಷ ಹಾಗೂ ಪರಿಶಿಷ್ಟ ಪಂಗಡದ 7.10 ಲಕ್ಷ ಜನರಿಗೆ ಸೌಲಭ್ಯ ಒದಗಿಸಲಾಗಿದೆ.

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ :**

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 14.88 | 14.88 | 14.85 | 99.80 | 99.80 |
| ಟಿ.ಎಸ್.ಪಿ | 2.40 | 2.40 | 2.39 | 99.58 | 99.58 |
| ಒಟ್ಟು | 17.28 | 17.28 | 17.24 | 99.77 | 99.77 |

- ಒಟ್ಟು ಶೇ.99.77 ಅನುದಾನ ವೆಚ್ಚವಾಗಿರುತ್ತದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಾಲಿಕತ್ವ/ಸಂಪಾದಕತ್ವದ ಪತ್ರಿಕೆಗಳಿಗೆ ಜಾಹೀರಾತು ನೀಡಲಾಗಿದೆ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಿರ್ಮಾಣ ಮತ್ತು ನಿರ್ದೇಶಿಸಿದ ಚಲನಚಿತ್ರಗಳಿಗೆ ರೂ.10.00 ಲಕ್ಷ ಪ್ರೋತ್ಸಾಹಧನ ನೀಡಲಾಗಿದೆ.
- ಪತ್ರಿಕೋದ್ಯಮ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ.

**ಪ್ರವಾಸೋದ್ಯಮ ಇಲಾಖೆ:**

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 2.00 | 2.00 | 2.00 | 100 | 100 |
| ಟಿ.ಎಸ್.ಪಿ | 1.00 | 1.00 | 1.00 | 100 | 100 |
| ಒಟ್ಟು | 3.00 | 3.00 | 3.00 | 100 | 100 |

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ :

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 7.50 | 7.50 | 7.50 | 100 | 100 |
| ಟಿ.ಎಸ್.ಪಿ | 2.50 | 2.50 | 2.50 | 100 | 100 |
| ಒಟ್ಟು | 10.00 | 10.00 | 10.00 | 100 | 100 |

- ಒಟ್ಟು ಶೇ. 100.00 ಅನುದಾನ ವೆಚ್ಚವಾಗಿರುತ್ತದೆ.

<u>ಪ್ರಮುಖ ಕಾರ್ಯಕ್ರಮಗಳು:</u>

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರಾಜ್ಯ/ರಾಷ್ಟ್ರ/ಅಂತರರಾಷ್ಟ್ರೀಯ ಮಟ್ಟದ ಪದಕ ವಿಜೇತ ಕ್ರೀಡಾಪಟುಗಳಿಗೆ ರೂ.1.00 ಲಕ್ಷದಿಂದ ರೂ.5.00 ಲಕ್ಷದವರೆಗೆ ಪ್ರೋತ್ಸಾಹಧನ ನೀಡಲಾಗಿದೆ.
- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ಶಾಲೆ/ನಿಲಯಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪೌಷ್ಟಿಕ ಆಹಾರ, ಕ್ರೀಡಾಗಂಟು, ಸಮವಸ್ತ್ರ, ಕ್ರೀಡಾ ಕಲರ್ಸ್, ಫಿಟ್ನೆಸ್/ ಕ್ರೀಡಾ ಸಾಮಾಗ್ರಿಗಳನ್ನು ನೀಡಲಾಗಿದೆ.
- ರಾಜ್ಯದ 8 ಜಿಲ್ಲೆಗಳಲ್ಲಿ 50 ಜನರಂತೆ ಜಾನಪದ ತರಬೇತಿಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಯುವಕ-ಯುವತಿಯವರಿಗೆ ನೀಡಲಾಗಿದೆ.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 987 ಮತ್ತು ಪರಿಶಿಷ್ಟ ಪಂಗಡದ 239 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ:

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 587.83 | 587.83 | 585.77 | 99.65 | 99.65 |
| ಟಿ.ಎಸ್.ಪಿ | 240.09 | 240.09 | 239.61 | 99.80 | 99.80 |
| ಒಟ್ಟು | 827.92 | 827.92 | 825.38 | 99.69 | 99.69 |

- ಒಟ್ಟು ಶೇ.99.69 ಅನುದಾನ ವೆಚ್ಚವಾಗಿರುತ್ತದೆ.

<u>ಪ್ರಮುಖ ಕಾರ್ಯಕ್ರಮಗಳು:</u>

- ಅನ್ನಭಾಗ್ಯ ಯೋಜನೆಯಡಿಯಲ್ಲಿ ಸುಮಾರು 37.94 ಲಕ್ಷ ಪ.ಜಾತಿ ಮತ್ತು 17.62 ಲಕ್ಷ ಪ.ಪಂಗಡದ ಫಲಾನುಭವಿಗಳಿಗೆ ಆಹಾರ ಧಾನ್ಯಗಳ ಸರಬರಾಜಿಗೆ ಸಹಾಯಧನ ನೀಡಲಾಗಿದೆ.

## ಕಂದಾಯ ಇಲಾಖೆ (ಸಾಮಾಜಿಕ ಭದ್ರತೆ):

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 2779.40 | 2779.40 | 2769.02 | 99.63 | 99.63 |
| ಟಿ.ಎಸ್.ಪಿ | 969.01 | 969.01 | 965.26 | 99.61 | 99.61 |
| ಒಟ್ಟು | 3748.41 | 3748.41 | 3734.28 | 99.62 | 99.62 |

- ಒಟ್ಟು ಶೇ.99.62 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಡತನ ರೇಖೆಗಿಂತ ಕೆಳಗಿರುವ ವಯಸ್ಸಾದ ಹಿರಿಯ ನಾಗರಿಕರಿಗೆ, ವಿಧವೆಯರಿಗೆ ಹಾಗೂ ವಿಕಲಚೇತನರಿಗೆ ಮಾಸಿಕ ಪಿಂಚಣಿ ಯೋಜನೆಯಡಿ ಪರಿಶಿಷ್ಟ ಜಾತಿಯ 20.30 ಲಕ್ಷ ಮತ್ತು ಪರಿಶಿಷ್ಟ ಪಂಗಡದ 8.55 ಲಕ್ಷ ಫಲಾನುಭವಿಗಳಗೆ ಪಿಂಚಣಿ ಸೌಲಭ್ಯ ಕಲ್ಪಿಸಲಾಗಿದೆ.
- "ರಾಷ್ಟ್ರೀಯ ಕುಟುಂಬ ಸೌಲಭ್ಯ ಯೋಜನೆ"ಯಡಿ 18 ರಿಂದ 59 ವರ್ಷ ವಯೋಮಿತಿಯ ದುಡಿಯುವ ಕುಟುಂಬದ ಮುಖ್ಯಸ್ಥ ಮರಣ ಹೊಂದಿದಲ್ಲಿ 20 ಸಾವಿರ ರೂ ಧನ ಸಹಾಯ ನೀಡುತ್ತಿದ್ದು, ಪರಿಶಿಷ್ಟ ಜಾತಿಯ 15,130 ಮತ್ತು ಪರಿಶಿಷ್ಟ ಪಂಗಡದ 6,730 ಕುಟುಂಬಗಳಗೆ ಧನಸಹಾಯ ನೀಡಲಾಗಿದೆ.
- ಆರಾಧನಾ ಯೋಜನೆಯಡಿ ರೂ.6.20 ಕೋಟಿ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ದೇವಾಲಯ ನಿರ್ಮಾಣ/ಜೀರ್ಣೋದ್ಧಾರ ಕಾರ್ಯಕ್ರಮಗಳಗಾಗಿ ಬಳಸಲಾಗಿದೆ.

ಕಂದಾಯ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 20.45 ಲಕ್ಷ ಮತ್ತು ಪರಿಶಿಷ್ಟ ಪಂಗಡದ 8.62 ಲಕ್ಷ ಫಲಾನುಭವಿಗಳಗೆ ವಿವಿಧ ಸೌಲಭ್ಯ ಕಲ್ಪಿಸಲಾಗಿದೆ.

**ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ (ಐ.ಟಿ & ಬಿ.ಟಿ):**

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 4.12 | 4.12 | 4.12 | 100 | 100 |
| ಟಿ.ಎಸ್.ಪಿ | 1.67 | 1.67 | 1.67 | 100 | 100 |
| ಒಟ್ಟು | 5.79 | 5.79 | 5.79 | 100 | 100 |

- ಒಟ್ಟು ಶೇ. 100.00 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ನವ ಉದ್ಯಮಿಗಳಗೆ Startup ಕಾರ್ಯಕ್ರಮಗಳಗೆ ಧನಸಹಾಯ ನೀಡಲಾಗುತ್ತಿದೆ.

**ವಸತಿ ಇಲಾಖೆ**

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 1492.88 | 1492.88 | 1492.88 | 100 | 100 |
| ಟಿ.ಎಸ್.ಪಿ | 253.53 | 253.53 | 253.53 | 100 | 100 |
| ಒಟ್ಟು | 1746.42 | 1746.42 | 1746.42 | 100 | 100 |

- ಒಟ್ಟು ಶೇ. 100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಆಶ್ರಯ, ಬಸವ ವಸತಿ, ವಾಜಪೇಯಿ ನಗರ ವಸತಿ, ಇಂದಿರಾ ಆವಾಸ್/ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಗ್ರಾಮೀಣ/ನಗರ ಪ್ರದೇಶದಲ್ಲಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಘಟಕ ವೆಚ್ಚ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ರೂ.2.00 ಲಕ್ಷ ನಿಗದಿಪಡಿಸಲಾಗಿದೆ.
- ವಸತಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 41,893 ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು 15,659 ಮನೆಗಳನ್ನು ಪರಿಶಿಷ್ಟ ಪಂಗಡದ ಫಲಾನುಭವಿಗಳಗೆ ನಿರ್ಮಿಸಲಾಗಿದೆ.

## ಉನ್ನತ ಶಿಕ್ಷಣ ಇಲಾಖೆ:

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 202.71 | 202.70 | 200.47 | 98.89 | 98.90 |
| ಟಿ.ಎಸ್.ಪಿ | 78.01 | 78.01 | 77.14 | 98.88 | 98.88 |
| ಒಟ್ಟು | 280.72 | 280.71 | 277.61 | 98.89 | 98.90 |

- ಒಟ್ಟು ಶೇ.98.90 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಶಿಕ್ಷಣ ಗುಣಮಟ್ಟ ಸುಧಾರಿಸಲು ಇಂಜಿನಿಯರಿಂಗ್ ಕಾಲೇಜುಗಳಿಗೆ ಉಪಕರಣಗಳನ್ನು ಒದಗಿಸಲಾಗಿದೆ.
- ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕೆ ಮೇಲ್ಪಟ್ಟು ರೂ.10.00 ಲಕ್ಷ ಒಳಗಿರುವ ಪರಿಶಿಷ್ಟ ಜಾತಿಯ 1651 ಹಾಗೂ ಪರಿಶಿಷ್ಟ ಪಂಗಡದ 747 ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಸಲಾಗಿದೆ.
- ಪರಿಶಿಷ್ಟ ಜಾತಿಯ 1162 ಮತ್ತು ಪರಿಶಿಷ್ಟ ಪಂಗಡದ 414 ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಸ್ಟೈಪೆಂಡ್ ನೀಡಲಾಗಿದೆ.
- ವಿಶ್ವವಿದ್ಯಾಲಯಗಳಿಗೆ ನೀಡಲಾಗುವ ಅನುದಾನದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಭೋಜನಾ ವೆಚ್ಚವನ್ನು ಭರಿಸಲಾಗಿದೆ.
- ವಿಜ್ಞಾನ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಪ್ರತಿಭಾವಂತ ಪದವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗಿದೆ.
- ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.

## ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ:

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 645.69 | 644.03 | 643.99 | 99.74 | 99.99 |
| ಟಿ.ಎಸ್.ಪಿ | 338.97 | 338.13 | 338.12 | 99.75 | 100 |
| ಒಟ್ಟು | 984.66 | 982.16 | 982.11 | 99.74 | 99.99 |

- ಒಟ್ಟು ಶೇ. 99.99 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ವಿದ್ಯಾ ವಿಕಾಸ ಯೋಜನೆಯಡಿ ರೂ.87.55 ಕೋಟಿ ವೆಚ್ಚದಲ್ಲಿ 14.25 ಲಕ್ಷ ಪ.ಜಾತಿ ಮತ್ತು 6.22 ಪ.ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಪಠ್ಯ ಪುಸ್ತಕ, ಸಮವಸ್ತ್ರ, ಶೂ ಒದಗಿಸಲಾಗಿದೆ.
- ಅಕ್ಷರ ದಾಸೋಹದಡಿ ಬಿಸಿ ಊಟ ಮತ್ತು ಕ್ಷೀರ ಭಾಗ್ಯ ಯೋಜನೆಗಳಡಿ ರೂ.522.32 ಕೋಟಿ ವೆಚ್ಚ ಭರಿಸಿದ್ದು, 36.42 ಲಕ್ಷ ಪ.ಜಾತಿ ಮತ್ತು 16.02 ಪ.ಪಂಗಡದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟ ಒದಗಿಸಲಾಗಿದೆ.
- ಎಸ್.ಎಸ್.ಎಲ್.ಸಿ./ಪಿ.ಯು.ಸಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಸರ್ಕಾರದಿಂದ ಭರಿಸಲಾಗಿದೆ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ 4164 ಶಾಲೆಗಳ ಕಟ್ಟಡ ನಿರ್ವಹಣೆ ಮತ್ತು ದುರಸ್ತಿ ಮಾಡಲಾಗಿದೆ.

- ಆರ್.ಟಿ.ಇ ಅಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 1.46 ಲಕ್ಷ ವಿದ್ಯಾರ್ಥಿಗಳಿಗೆ ರೂ.196.82 ಕೋಟಿ ಮೊತ್ತದ ಶುಲ್ಕ ಮರುಪಾವತಿಸಲಾಗಿದೆ.

## ಕೈಮಗ್ಗ ಮತ್ತು ಜವಳಿ ಇಲಾಖೆ

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 70.34 | 70.34 | 70.34 | 100 | 100 |
| ಟಿ.ಎಸ್.ಪಿ | 12.43 | 12.43 | 12.43 | 100 | 100 |
| ಒಟ್ಟು | 82.77 | 82.77 | 82.77 | 100 | 100 |

- ಒಟ್ಟು ಶೇ. 100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಪ.ಜಾತಿ ಹಾಗೂ ಪ.ಪಂಗಡದ 155 ಫಲಾನುಭವಿಗಳಿಗೆ ರೂ.8.94 ಕೋಟಿ ಸಹಾಯಧನ ನೀಡಲಾಗಿದೆ.
- ವಿದ್ಯುತ್ ಮಗ್ಗಗಳಿಗೆ ಶೇ.90 ರಷ್ಟು ಸಹಾಯಧನ ನೀಡಲಾಗಿದೆ.
- ಸಿದ್ಧ ಉಡುಪು ನೀತಿ ಅನುಷ್ಠಾನದಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 83 ಫಲಾನುಭವಿಗಳಿಗೆ ರೂ.71.00 ಕೋಟಿ ಸಹಾಯಧನ ನೀಡಲಾಗಿದೆ.

## ಸಣ್ಣ ಕೈಗಾರಿಕೆ ಇಲಾಖೆ:

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 267.03 | 266.99 | 266.99 | 100 | 100 |
| ಟಿ.ಎಸ್.ಪಿ | 44.45 | 44.43 | 44.43 | 100 | 100 |
| ಒಟ್ಟು | 311.48 | 311.42 | 311.42 | 100 | 100 |

- ಒಟ್ಟು ಶೇ. 100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 60% ಸಹಾಯಧನ ಮತ್ತು ಸಾಫ್ಟ್ ಸೀಡ್ ಕ್ಯಾಪಿಟಲ್‌ಗೆ ಆರ್ಥಿಕ ಸಹಾಯ ನೀಡುವ ಯೋಜನೆಯಡಿ ಪ.ಜಾತಿಯ 279 ಹಾಗೂ ಪ.ಪಂಗಡದ 86 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಿದ್ದು, ರೂ.20.70 ಕೋಟಿ ವೆಚ್ಚ ಭರಿಸಲಾಗಿದೆ.
- ಕೆ.ಐ.ಎ.ಡಿ.ಬಿ ಮೂಲಕ ಕೈಗಾರಿಕಾ ನಿವೇಶನಕ್ಕೆ 75% ಸಹಾಯಧನ ನೀಡುತ್ತಿದ್ದು, ಪ.ಜಾತಿಯ 400 ಹಾಗೂ ಪ.ಪಂಗಡದ 60 ಫಲಾನುಭವಿಗಳಿಗೆ ನಿವೇಶನಗಳನ್ನು ಒದಗಿಸಿದ್ದು, ರೂ.287.00 ಕೋಟಿ ವೆಚ್ಚ ಭರಿಸಲಾಗಿದೆ.

ಸಣ್ಣ ಕೈಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 681 ಮತ್ತು ಪರಿಶಿಷ್ಟ ಪಂಗಡದ 148 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

**ನಗರಾಭಿವೃದ್ಧಿ ಇಲಾಖೆ :**

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 827.48 | 815.48 | 815.48 | 98.55 | 100.00 |
| ಟಿ.ಎಸ್.ಪಿ | 317.60 | 313.60 | 313.60 | 98.74 | 100.00 |
| ಒಟ್ಟು | 1145.08 | 1129.08 | 1129.08 | 98.60 | 100.00 |

- ಒಟ್ಟು ಶೇ. 100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಗರ ಪ್ರದೇಶಗಳಲ್ಲಿ ಪ.ಜಾತಿ/ಪ.ಪಂಗಡದ ಜನರಿಗೆ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗಿದೆ.
- ನಗರ ಸ್ಥಳೀಯ ಸಂಸ್ಥೆಗಳಿಂದ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಹೆಚ್ಚಿರುವ ಜನವಸತಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗುತ್ತಿದೆ.
- ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೂಲಕ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗಿದೆ.
- ಖಾಯಂ ಪೌರಕಾರ್ಮಿಕರಿಗೆ ವಸತಿ ಯೋಜನೆ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ೨೬೦ ಪೌರಕಾರ್ಮಿಕರಿಗೆ ವಸತಿ ಸೌಲಭ್ಯ ಒದಗಿಸಲಾಗಿದೆ.

**ಲೋಕೋಪಯೋಗಿ ಇಲಾಖೆ**

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 561.15 | 560.43 | 546.67 | 97.42 | 97.54 |
| ಟಿ.ಎಸ್.ಪಿ | 270.84 | 270.79 | 266.56 | 98.42 | 98.44 |
| ಒಟ್ಟು | 832.00 | 831.23 | 813.23 | 97.74 | 97.83 |

- ಒಟ್ಟು ಶೇ.97.83 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಸಿ.ಸಿ.ರಸ್ತೆ/ಸಂಪರ್ಕ ರಸ್ತೆ ಮತ್ತು ಚರಂಡಿ ನಿರ್ಮಿಸಲಾಗಿದ್ದು, ಒಟ್ಟು 1,121 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

**ಭಾರಿ ನೀರಾವರಿ ಇಲಾಖೆ :**

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 1450.60 | 1450.60 | 1450.60 | 100 | 100 |
| ಟಿ.ಎಸ್.ಪಿ | 809.00 | 809.00 | 809.00 | 100 | 100 |
| ಒಟ್ಟು | 2259.60 | 2259.60 | 2259.60 | 100 | 100 |

- ಒಟ್ಟು ಶೇ. 100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಕೃಷ್ಣಭಾಗ್ಯ ಜಲನಿಗಮ, ಕರ್ನಾಟಕ ನೀರಾವರಿ ನಿಗಮ, ವಿಶ್ವೇಶ್ವರಯ್ಯ ಜಲನಿಗಮ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಯಡಿ – ಎ.ಐ.ಬಿ.ಪಿ, ಕಾಡಾ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ.
- ಸದರಿ ನಿಗಮಗಳ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ 5445 ಫಲಾನುಭವಿಗಳಿಗೆ ಏತ ನೀರಾವರಿ, ತೆರೆದಬಾವಿ, ಕೊಳವೆ ಬಾವಿಗಳ ಮೂಲಕ ನೀರಾವರಿ ಸೌಲಭ್ಯ ಒದಗಿಸಲಾಗಿದೆ.
- ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪಂಗಡದ ಕಾಲೋನಿಗಳಲ್ಲಿ ರಸ್ತೆ, ಸಮುದಾಯ ಭವನ ಇತ್ಯಾದಿ 2439 ಕಾಮಗಾರಿಗಳ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

## ಸಣ್ಣ ನೀರಾವರಿ ಇಲಾಖೆ :

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 251.00 | 251.00 | 251.00 | 100 | 100 |
| ಟಿ.ಎಸ್.ಪಿ | 110.35 | 110.35 | 109.60 | 99.32 | 99.32 |
| ಒಟ್ಟು | 361.36 | 361.36 | 360.60 | 99.79 | 99.79 |

- ಒಟ್ಟು ಶೇ.99.79 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರ ಜಮೀನುಗಳಿಗೆ ವೈಯಕ್ತಿಕ ಮತ್ತು ಸಾಮೂಹಿಕವಾಗಿ ನೀರಾವರಿ ಸೌಲಭ್ಯ ಕಲ್ಪಿಸಲು ಏತ ನೀರಾವರಿ, ತೆರೆದ ಬಾವಿ, ಕೊಳವೆ ಬಾವಿ ಹಾಗೂ ಅಂತರ್ಜಲ ವೃದ್ಧಿಸಲು ಚೆಕ್‌ಡ್ಯಾಂ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ಸಣ್ಣ ನೀರಾವರಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಒಟ್ಟು 3935 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

## ವೈದ್ಯಕೀಯ ಶಿಕ್ಷಣ ಇಲಾಖೆ :

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 100.01 | 81.62 | 81.62 | 81.61 | 100 |
| ಟಿ.ಎಸ್.ಪಿ | 47.32 | 36.81 | 36.17 | 76.44 | 98.26 |
| ಒಟ್ಟು | 147.33 | 118.43 | 117.79 | 79.95 | 99.46 |

- ಒಟ್ಟು ಶೇ.99.46 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಜಯದೇವ ಹೃದ್ರೋಗ ಸಂಸ್ಥೆ, ಕಿದ್ವಾಯಿ ಮತ್ತಿತರ ಉನ್ನತ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೋಗಿಗಳಿಗೆ ಚಿಕಿತ್ಸೆ ಹಾಗೂ ಶಸ್ತ್ರ ಚಿಕಿತ್ಸೆಗಾಗಿ ತಗಲುವ ಪೂರ್ಣ ವೆಚ್ಚ ಸರ್ಕಾರದಿಂದ ಭರಿಸಲಾಗುತ್ತಿದೆ. ಪ.ಜಾತಿಯ 73296 ಹಾಗೂ ಪ.ಪಂಗಡದ 31800 ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲಾಗಿದೆ.
- ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕೆ ಮೇಲ್ಪಟ್ಟು ರೂ.10.00 ಲಕ್ಷದವರೆಗೆ ಇರುವ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 166599 ಮತ್ತು ಪರಿಶಿಷ್ಟ ಪಂಗಡದ 49934 ಜನರಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 926.14 | 874.58 | 874.34 | 94.41 | 99.97 |
| ಟಿ.ಎಸ್.ಪಿ | 339.55 | 250.53 | 249.15 | 73.38 | 99.45 |
| ಒಟ್ಟು | 1265.69 | 1125.10 | 1123.49 | 88.77 | 99.86 |

- ಒಟ್ಟು ಶೇ. 99.86 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಆಯುಷ್ಮಾನ್ ಭಾರತ – ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯಡಿ ರೂ.205.61 ಕೋಟಿ ವೆಚ್ಚದಲ್ಲಿ ಪ.ಜಾತಿ ಮತ್ತು ಪ.ಪಂಗಡದ ರೋಗಿಗಳಿಗೆ ಸೌಲಭ್ಯ ಒದಗಿಸಲಾಗಿದೆ.
- ಆರೋಗ್ಯ ಕವಚ 108 ಯೋಜನೆಯಡಿ ರೂ.37.50 ಕೋಟಿ ವೆಚ್ಚದಲ್ಲಿ ಪ.ಜಾತಿ ಮತ್ತು ಪ.ಪಂಗಡದ ರೋಗಿಗಳಿಗೆ ಆಂಬ್ಯುಲೆನ್ಸ್ ಸೇವೆ ಒದಗಿಸಲಾಗಿದೆ.
- ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರಿಗೆ ವಿವಿಧ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಜನನಿ ಸುರಕ್ಷಾ ಯೋಜನೆ, ರೋಗನಿರೋಧಕ ಲಸಿಕಾ ಕಾರ್ಯಕ್ರಮ, ರಾಷ್ಟ್ರೀಯ ಬಾಲ ಸುರಕ್ಷಾ ಕಾರ್ಯಕ್ರಮ, ಸುವರ್ಣ ಆರೋಗ್ಯ ಚೈತನ್ಯ, ಆರೋಗ್ಯ ಕವಚ ಮತ್ತು ಸಂಚಾರಿ ಆರೋಗ್ಯ ಘಟಕಗಳ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ.
- ಭಾರತೀಯ ವೈದ್ಯ ಪದ್ಧತಿಯಲ್ಲಿ ಬರುವ ಆಯುಷ್ ಹೋಮಿಯೋಪತಿ, ಯುನಾನಿ, ಪ್ರಕೃತಿ ಚಿಕಿತ್ಸಾ ಇವುಗಳಲ್ಲಿ ಉಚಿತ ಚಿಕಿತ್ಸೆ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ಮಾಡಲಾಗಿದೆ.
- ಆಯುಷ್ ವೈದ್ಯ ಪದ್ಧತಿಯ ಬಗ್ಗೆ ಒಟ್ಟು 8,507 ಜನರಿಗೆ ಅರಿವು ಮೂಡಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆಯ 184 ವಿದ್ಯಾರ್ಥಿನಿಲಯಗಳ ಆವರಣದಲ್ಲಿ ಗಿಡಮೂಲಿಕಾ ಸಸ್ಯಗಳನ್ನು ಬೆಳೆಸಲಾಗಿದೆ.
- ತಾಯಿಭಾಗ್ಯ ಯೋಜನೆಯಡಿ ಮಡಿಲು ಕಿಟ್ ವಿತರಣೆ ಹಾಗೂ ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕಾಂಶಗಳ ನೆರವು ಪಡೆಯಲು ರೂ.2,000/- ಧನಸಹಾಯ ನೀಡಲಾಗಿದೆ.
- ಪ.ಜಾತಿಯ 41,917 ಮತ್ತು ಪ.ಪಂಗಡದ 18,835 ರೋಗಿಗಳಿಗೆ ಡಯಾಲಿಸೀಸ್ ಚಿಕಿತ್ಸಾ ಸೌಲಭ್ಯವನ್ನು ಒದಗಿಸಲಾಗಿದೆ.

## ಕಾರ್ಮಿಕ ಇಲಾಖೆ :

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 0.68 | 0.68 | 0.68 | 100 | 100 |
| ಟಿ.ಎಸ್.ಪಿ | 0.28 | 0.28 | 0.28 | 100 | 100 |
| ಒಟ್ಟು | 0.96 | 0.96 | 0.96 | 100 | 100 |

- ಒಟ್ಟು ಶೇ. 100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಬಾಲಕಾರ್ಮಿಕರಿಗೆ ಪುನರ್ವಸತಿ ಯೋಜನೆಯಡಿ ಅರಿವು ಮೂಡಿಸುವ ಕಾರ್ಯಕ್ರಮ ಮತ್ತು ಕಿಟ್ ವಿತರಣೆ.

## ಕೌಶಲ್ಯಾಭಿವೃದ್ಧಿ, ಉದ್ಯೋಗ ಮತ್ತು ತರಬೇತಿ ಇಲಾಖೆ:

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 93.14 | 75.49 | 75.49 | 81.05 | 100 |
| ಟಿ.ಎಸ್.ಪಿ | 47.33 | 36.12 | 36.12 | 76.32 | 100 |
| ಒಟ್ಟು | 140.47 | 111.62 | 111.62 | 79.46 | 100 |

- ಒಟ್ಟು ಶೇ.100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು :**

- ಪ.ಜಾತಿಯ 10590 ಹಾಗೂ ಪ.ಪಂಗಡದ 3676 ಯುವಕ/ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗಿದೆ.
- ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ಪ.ಜಾತಿಯ 18746 ಮತ್ತು ಪ.ಪಂಗಡದ 6409 ಜನರಿಗೆ ತರಬೇತಿ ಮತ್ತು ಸಹಾಯಧನ ನೀಡಲಾಗಿದೆ.
- ಪ.ಜಾತಿಯ 10388 ಹಾಗೂ ಪ.ಪಂಗಡದ 4425 ಐಟಿಐ ವಿದ್ಯಾರ್ಥಿಗಳಿಗೆ ಟೂಲ್ ಕಿಟ್ ಮತ್ತು ಲೇಖನ ಸಾಮಾಗ್ರಿಗಳನ್ನು ವಿತರಿಸಲಾಗಿದೆ.

ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿಯ 40427 ಮತ್ತು ಪರಿಶಿಷ್ಟ ಪಂಗಡದ 14763 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಇಂಧನ ಇಲಾಖೆ :

(ರೂ.ಕೋಟಿಗಳಲ್ಲಿ)

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 1924.39 | 1924.39 | 1924.39 | 100 | 100 |
| ಟಿ.ಎಸ್.ಪಿ | 667.30 | 667.30 | 667.30 | 100 | 100 |
| ಒಟ್ಟು | 2591.69 | 2591.69 | 2591.69 | 100 | 100 |

- ಒಟ್ಟು ಶೇ. 100 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.
- ಪರಿಶಿಷ್ಟ ಜಾತಿಯ 2.24 ಲಕ್ಷ ಹಾಗೂ ಪರಿಶಿಷ್ಟ ಪಂಗಡದ 1.40 ಲಕ್ಷ ರೈತರ 10 ಹೆಚ್.ಪಿ ವರೆಗಿನ ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲಾಗಿದೆ.
- ಕುಟೀರ ಜ್ಯೋತಿ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಿ.ಪಿ.ಎಲ್. ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಕಲ್ಪಿಸಲಾಗಿದೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ :

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 16.32 | 16.32 | 14.88 | 91.18 | 91.18 |
| ಟಿ.ಎಸ್.ಪಿ | 4.46 | 4.46 | 4.08 | 91.48 | 91.48 |
| ಒಟ್ಟು | 20.79 | 20.79 | 18.96 | 91.20 | 91.20 |

- ಒಟ್ಟು ಶೇ.**91.20** ಅನುದಾನ ವೆಚ್ಚವಾಗಿರುತ್ತದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲಾವಿದರಿಗೆ ಪ್ರೋತ್ಸಾಹಧನ ನೀಡಲಾಗಿದೆ.
- ಪ.ಜಾತಿ/ಪ.ಪಂಗಡ ಸಾಂಸ್ಕೃತಿಕ ಸಂಘಗಳಿಗೆ ಧನಸಹಾಯ ನೀಡಲಾಗಿದೆ.
- ಜನಪರ ಉತ್ಸವ ಮತ್ತು ಕಲಾ ಶಿಬಿರಗಳನ್ನು ಏರ್ಪಡಿಸಲಾಗಿದೆ.
- ಕನ್ನಡ ಸಂಸ್ಕೃತಿ ಇಲಾಖೆಯಡಿ ಪ.ಜಾತಿಯ 1665 ಹಾಗೂ ಪ.ಪಂಗಡದ 835 ಕಲಾವಿದರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ.

## ಯೋಜನಾ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ :

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 745.22 | 745.19 | 745.19 | 100 | 100 |
| ಟಿ.ಎಸ್.ಪಿ | 309.35 | 309.33 | 309.33 | 99.99 | 100 |
| ಒಟ್ಟು | 1054.56 | 1054.53 | 1054.53 | 100 | 100 |

- ಒಟ್ಟು ಶೇ.100 ಅನುದಾನ ವೆಚ್ಚವಾಗಿರುತ್ತದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ ಅಡಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ/ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆ, ಸಮುದಾಯ ಭವನ ನಿರ್ಮಾಣ, ಸಂಪರ್ಕ ರಸ್ತೆ, ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಕೆ, ಅಂಗನವಾಡಿ ಕೇಂದ್ರ ನಿರ್ಮಾಣ, ಶಾಲೆಗಳಿಗೆ ಕಟ್ಟಡ, ವಿದ್ಯಾರ್ಥಿನಿಲಯಗಳಲ್ಲಿ/ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ನಿರ್ಮಾಣ ಇತ್ಯಾದಿ ಮೂಲಭೂತ ಸೌಕರ್ಯ ಕಲ್ಪಿಸಲು ಅನುದಾನ ನೀಡಲಾಗುತ್ತಿದೆ.
- ಒಟ್ಟು 4950 ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗಿದೆ.

## ಸಮಾಜ ಕಲ್ಯಾಣ ಇಲಾಖೆ: ಪ.ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳು:

**(ರೂ.ಕೋಟಿಗಳಲ್ಲಿ)**

| ಯೋಜನೆ | ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ ಶೇ | ಬಿಡುಗಡೆಗೆ ಶೇ |
|---|---|---|---|---|---|
| ಎಸ್.ಸಿ.ಎಸ್.ಪಿ | 4604.59 | 4425.40 | 4411.68 | 95.81 | 99.69 |
| ಟಿ.ಎಸ್.ಪಿ | 1709.40 | 1585.24 | 1577.88 | 92.31 | 99.54 |
| ಒಟ್ಟು | 6313.99 | 6010.64 | 5989.56 | 94.86 | 99.65 |

- ಒಟ್ಟು ಶೇ.**99.65** ಅನುದಾನ ವೆಚ್ಚವಾಗಿರುತ್ತದೆ.

**ಅನುಷ್ಠಾನ ಮಾಡಿರುವ ಪ್ರಮುಖ ಕಾರ್ಯಕ್ರಮಗಳು**

- **ವಿದ್ಯಾರ್ಥಿನಿಲಯಗಳ ನಿರ್ವಹಣೆ:** ಸಮಾಜ ಕಲ್ಯಾಣ ಇಲಾಖೆ ಅಡಿ ಅರ್ಹ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶವನ್ನು ನೀಡಲಾಗುತ್ತಿದ್ದು, ಪ.ಜಾತಿ ಮತ್ತು ಪ.ಪಂಗಡದ 2122 ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗೆ ಅನುಗುಣವಾಗಿ 1.95 ಲಕ್ಷ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅವಕಾಶ ಕಲ್ಪಿಸಲಾಗಿದೆ.

- **ವಿದ್ಯಾರ್ಥಿವೇತನ (Day scholarship):** ಒಟ್ಟು ರೂ.258.78 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿಯ 7.50 ಲಕ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮತ್ತು ರೂ.89.18 ಕೋಟಿ ವೆಚ್ಚದಲ್ಲಿ ಪ.ಪಂಗಡದ 3.00 ಲಕ್ಷ ವಿದ್ಯಾರ್ಥಿಗಳಿಗೆ Day scholarship ನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ.

  ಒಟ್ಟು ರೂ.233.10 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿಯ 2.96 ಲಕ್ಷ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮತ್ತು ರೂ.49.56 ಕೋಟಿ ವೆಚ್ಚದಲ್ಲಿ ಪ.ಪಂಗಡದ 0.38 ಲಕ್ಷ ವಿದ್ಯಾರ್ಥಿಗಳಿಗೆ Day scholarship ನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ.

- **ಪ್ರೋತ್ಸಾಹಧನ:** ಎಸ್.ಎಸ್.ಎಲ್.ಸಿ ಮತ್ತು ಮೆಟ್ರಿಕ್ ನಂತರದ ತರಗತಿಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ 1.70 ಲಕ್ಷ ವಿದ್ಯಾರ್ಥಿಗಳಿಗೆ ರೂ.284.76 ಕೋಟಿಗಳನ್ನು ಮತ್ತು ಪರಿಶಿಷ್ಟ ಪಂಗಡದ 0.34ಲಕ್ಷ ವಿದ್ಯಾರ್ಥಿಗಳಿಗೆ ರೂ.45.00 ಕೋಟಿಗಳನ್ನು ಪ್ರೋತ್ಸಾಹಧನವನ್ನಾಗಿ ನೀಡಲಾಗಿದೆ.

- **ಪ್ರಬುದ್ಧ ಯೋಜನೆ:** ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ಪ್ರಬುದ್ಧ ಯೋಜನೆ ಅಡಿ ಪರಿಶಿಷ್ಟ ಜಾತಿಯ 98 ವಿದ್ಯಾರ್ಥಿಗಳನ್ನು ಮತ್ತು ಪರಿಶಿಷ್ಟ ಪಂಗಡದ 35 ವಿದ್ಯಾರ್ಥಿಗಳನ್ನು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗಕ್ಕೆ ನಿಯೋಜಿಸಲಾಗಿದ್ದು, ರೂ.31.53 ಕೋಟಿಗಳ ವೆಚ್ಚ ಭರಿಸಲಾಗಿದೆ.

- **ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ:** 2022-23ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಮತ್ತು ಕ್ರೈಸ್ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕಾಗಿ ರೂ.840.00 ಕೋಟಿ ಅನುದಾನ ಒದಗಿಸಲಾಗಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

- **ಅಂತರ್ ಜಾತಿ ಮತ್ತು ವಿವಿಧ ವಿವಾಹ**ಗಳಿಗೆ ನೀಡುವ ಪ್ರೋತ್ಸಾಹಧನ ಕಾರ್ಯಕ್ರಮದಡಿ ಒಟ್ಟು ಪ.ಜಾತಿಯ 5095 ದಂಪತಿಗಳಿಗೆ ರೂ. 128.25 ಕೋಟಿ ಹಾಗೂ ಪ.ಪಂಗಡದ 609 ದಂಪತಿಗಳಿಗೆ ರೂ.18.24 ಕೋಟಿಗಳನ್ನು ಪ್ರೋತ್ಸಾಹಧನವನ್ನಾಗಿ ನೀಡಲಾಗಿದೆ.

- **ಅರಣ್ಯ ಮತ್ತು ಅರಣ್ಯದ ಅಂಚಿನಲ್ಲಿರುವ** ಪರಿಶಿಷ್ಟ ಪಂಗಡದ ಮೂಲನಿವಾಸಿ/ಆದಿವಾಸಿ ಸಮುದಾಯಗಳ 46711 ಕುಟುಂಬಗಳಿಗೆ ರೂ.52.00 ಕೋಟಿಗಳ ವೆಚ್ಚದಲ್ಲಿ ಪೌಷ್ಟಿಕ ಆಹಾರ ಒದಗಿಸಲಾಗಿದೆ.

- **ಕಾನೂನು ಪದವೀಧರರ ತರಬೇತಿ –** ಪ.ಜಾತಿ/ಪ.ಪಂಗಡದ ಕಾನೂನು ಪದವೀಧರರಿಗೆ 2 ವರ್ಷ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುತ್ತಿದ್ದು, ತರಬೇತಿಯ ಅವಧಿಯಲ್ಲಿ ಪ್ರತಿ ತಿಂಗಳು ರೂ.10000/- ದಂತೆ ಶಿಷ್ಯವೇತನ ನೀಡಲಾಗುತ್ತಿದೆ. ಪ.ಜಾತಿ ಹಾಗೂ ಪ.ಪಂಗಡದ 1390 ಕಾನೂನು ಪದವೀಧರರಿಗೆ ರೂ.10.70 ಕೋಟಿಗಳ ಶಿಷ್ಯವೇತನ ನೀಡಲಾಗಿದೆ.

- **ಪ.ಜಾತಿ ಮತ್ತು ಪ.ಪಂಗಡದ ಉದ್ಯಮಿಗಳಿಗೆ 4% ಬಡ್ಡಿ ಸಹಾಯಧನ–** ಪ.ಜಾತಿಯ 237 ಹಾಗೂ ಪ.ಪಂಗಡದ 311 ಉದ್ಯಮಿಗಳಿಗೆ ಒಟ್ಟು ರೂ.63.36 ಕೋಟಿ ಬಡ್ಡಿ ಸಹಾಯಧನ ನೀಡಲಾಗಿದೆ.

- **ಕೆ.ಎಸ್.ಎಫ್‌ಸಿ. ಯಿಂದ ಸಾಲ ಮಂಜೂರಾತಿಗೆ ಸಮಾನಾಂತರ ಖಾತ್ರಿ**: ಪರಿಶಿಷ್ಟ ಜಾತಿಯ 36 ಹಾಗೂ ಪ.ಪಂಗಡದ 4 ಉದ್ಯಮಿಗಳಿಗೆ ಯೋಜನೆಯ ಷರತ್ತುಗಳನ್ವಯ ಸಮಾನಾಂತರ ಖಾತ್ರಿ ಒದಗಿಸಲಾಗಿದೆ.

- **ಪರಿಶಿಷ್ಟ ಜಾತಿ ಹಾಗೂ ಪ.ಪಂಗಡದವರ ಕಾಲೋನಿ ಅಭಿವೃದ್ಧಿ**: ರೂ.271.19 ಕೋಟಿಗಳ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ತಾಂಡಾ ಅಭಿವೃದ್ಧಿ ನಿಗಮದಿಂದ ತಾಂಡಾಗಳಲ್ಲಿ ಮೂಲಭೂತ ಸೌಕರ್ಯಗಳಡಿ ರೂ.72.33 ಕೋಟಿ ವೆಚ್ಚದಲ್ಲಿ 5744 ಕಾಮಗಾರಿಗಳನ್ನು ಅನುಷ್ಟಾನ ಮಾಡಲಾಗಿದೆ.

- **ಸಮುದಾಯ ಭವನಗಳ ಕಟ್ಟಡ ನಿರ್ಮಾಣ**: 2022-23ನೇ ಸಾಲಿನಲ್ಲಿ ರೂ.35.40 ಕೋಟಿಗಳ ವೆಚ್ಚದಲ್ಲಿ ಕಾಮಗಾರಿ ಪ್ರಗತಿಯಲ್ಲಿರುವ 254 ಭವನಗಳ ಕಟ್ಟಡಗಳನ್ನು ಪೂರ್ಣಗೊಳಸಲು ಕ್ರಮವಹಿಸಲಾಗಿರುತ್ತದೆ.

  2022-23ನೇ ಸಾಲಿನಲ್ಲಿ ರೂ.22.50 ಕೋಟಿಗಳ ಮೊತ್ತದಲ್ಲಿ ಮಹರ್ಷಿ ವಾಲ್ಮೀಕಿ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಮಂಜೂರಾತಿ ನೀಡಲಾಗಿದೆ.

- **ಕ್ರೈಸ್ ವಸತಿ ಶಾಲೆ**: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ 833 ವಸತಿ ಶಾಲೆ/ಕಾಲೇಜುಗಳನ್ನು ನಡೆಸಲಾಗುತ್ತಿದೆ. 2.15 ಲಕ್ಷ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ನೀಡಲಾಗಿದೆ.

  ಮಾರ್ಚ್-2023 ರಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾದ ಕ್ರೈಸ್ ವಸತಿ ಶಾಲೆಗಳ 35126 ವಿದ್ಯಾರ್ಥಿಗಳಲ್ಲಿ 34540 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 98.33% ಫಲಿತಾಂಶ ಬಂದಿರುತ್ತದೆ. ಇದರಲ್ಲಿ, 33494 (97%) ವಿದ್ಯಾರ್ಥಿಗಳು 60% ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿರುತ್ತಾರೆ.

  ಹೊಸದಾಗಿ 25 ವಸತಿ ಶಾಲಾ ಕಟ್ಟಡಗಳನ್ನು ಪೂರ್ಣಗೊಳಿಸಲಾಗಿದೆ ಮತ್ತು 55 ಕಟ್ಟಡಗಳು ಪ್ರಗತಿಯಲ್ಲಿವೆ.

## I. ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

1. **ಗಂಗಾ ಕಲ್ಯಾಣ ಯೋಜನೆ** – ರೂ.69.62 ಕೋಟಿ ವೆಚ್ಚದಲ್ಲಿ 1104 ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. 107 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ. 211 ಫಲಾನುಭವಿಗಳಿಗೆ ರೂ.2.17 ಕೋಟಿ ವೆಚ್ಚದಲ್ಲಿ ಏತ ನೀರಾವರಿ ಸೌಲಭ್ಯ ಒದಗಿಸಲಾಗಿದೆ.
2. **ಭೂ ಒಡೆತನ** – 58 ಫಲಾನುಭವಿಗಳಿಗೆ ರೂ.7.89 ಕೋಟಿಗಳ ವೆಚ್ಚದಲ್ಲಿ 75.09 ಎಕರೆ ಜಮೀನನ್ನು ಖರೀದಿಸಿ ನೀಡಲಾಗಿದೆ.
3. **ಸ್ವಯಂ ಉದ್ಯೋಗ (ನೇರ ಸಾಲ)**– 5349 ಫಲಾನುಭವಿಗಳಿಗೆ ರೂ.37.53 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
4. **ಕಿರುಸಾಲ ಯೋಜನೆ** – 712 ಫಲಾನುಭವಿಗಳಿಗೆ ರೂ.1.78 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.

## II. ಆದಿ ಜಾಂಬವ ಅಭಿವೃದ್ಧಿ ನಿಗಮ

1. **ಭೂ ಒಡೆತನ** – 608 ಫಲಾನುಭವಿಗಳಿಗೆ ರೂ.78.83 ಕೋಟಿಗಳ ವೆಚ್ಚದಲ್ಲಿ 722.04 ಎಕರೆ ಜಮೀನನ್ನು ಖರೀದಿಸಿ ನೀಡಲಾಗಿದೆ.
2. **ಸ್ವಯಂ ಉದ್ಯೋಗ (ನೇರ ಸಾಲ)**– 1776 ಫಲಾನುಭವಿಗಳಿಗೆ ರೂ.10.39 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.

3. **ಉದ್ಯಮ ಶೀಲತಾ ಯೋಜನೆ**–

- ರೂ. 2.00 ಲಕ್ಷ ಸಹಾಯಧನ ಯೋಜನೆಯಡಿ 132 ಫಲಾನುಭವಿಗಳಿಗೆ ರೂ.1.93 ಕೋಟಿ ಸಹಾಯಧನ ನೀಡಲಾಗಿದೆ.
- ರೂ. 3.50 ಲಕ್ಷ ಸಹಾಯಧನ ಯೋಜನೆಯಡಿ 57 ಫಲಾನುಭವಿಗಳಿಗೆ ರೂ.1.99 ಕೋಟಿ ಸಹಾಯಧನ ನೀಡಲಾಗಿದೆ.
- ದ್ವಿಚಕ್ರ ವಾಹನ ಸೌಲಭ್ಯ ಯೋಜನೆಯಡಿ 3587 ಫಲಾನುಭವಿಗಳಿಗೆ ರೂ 25.11 ಕೋಟಿ ವೆಚ್ಚದಲ್ಲಿ ಸೌಲಭ್ಯ ಒದಗಿಸಲಾಗಿದೆ.

4. **ಕಿರುಸಾಲ ಯೋಜನೆ** - 830 ಫಲಾನುಭವಿಗಳಿಗೆ ರೂ. 2.05 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
5. **ಗಂಗಾ ಕಲ್ಯಾಣ ಯೋಜನೆ** – ರೂ. 36.25 ಕೋಟಿ ವೆಚ್ಚದಲ್ಲಿ 101 ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

## III. ತಾಂಡಾ ಅಭಿವೃದ್ಧಿ ನಿಗಮ

1. **ಗಂಗಾ ಕಲ್ಯಾಣ ಯೋಜನೆ** – ರೂ. 2.50 ಕೋಟಿ ವೆಚ್ಚದಲ್ಲಿ 284 ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.
2. **ಭೂ ಒಡೆತನ** - 185 ಫಲಾನುಭವಿಗಳಿಗೆ ರೂ.20.89 ಕೋಟಿಗಳ ವೆಚ್ಚದಲ್ಲಿ 124 ಎಕರೆ ಜಮೀನನ್ನು ಖರೀದಿಸಿ ನೀಡಲಾಗಿದೆ.
3. **ಸ್ವಯಂ ಉದ್ಯೋಗ (ನೇರ ಸಾಲ)**– 1004 ಫಲಾನುಭವಿಗಳಿಗೆ ರೂ.16.66 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
4. **ಮೂಲಭೂತ ಸೌಕರ್ಯ ಯೋಜನೆ**– 5744 ಕಾಮಗಾರಿಗಳನ್ನು ರೂ. 72.34 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನ ಮಾಡಲಾಗಿದೆ.

## IV. ಭೋವಿ ಅಭಿವೃದ್ಧಿ ನಿಗಮ

1. **ಭೂ ಒಡೆತನ** - 50 ಫಲಾನುಭವಿಗಳಿಗೆ ರೂ.2.80 ಕೋಟಿಗಳ ವೆಚ್ಚದಲ್ಲಿ 77.13 ಎಕರೆ ಜಮೀನನ್ನು ಖರೀದಿಸಿ ನೀಡಲಾಗಿದೆ.
2. **ಸ್ವಯಂ ಉದ್ಯೋಗ (ನೇರ ಸಾಲ)**– 400 ಫಲಾನುಭವಿಗಳಿಗೆ ರೂ.1.00 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
3. **ಉದ್ಯಮ ಶೀಲತಾ ಯೋಜನೆ**–
   - ರೂ. 2.00 ಲಕ್ಷ ಸಹಾಯಧನ ಯೋಜನೆಯಡಿ 80 ಫಲಾನುಭವಿಗಳಿಗೆ ರೂ. 1.60 ಕೋಟಿ ಸಹಾಯಧನ ನೀಡಲಾಗಿದೆ.
   - ರೂ. 3.50 ಲಕ್ಷ ಸಹಾಯಧನ ಯೋಜನೆಯಡಿ 46 ಫಲಾನುಭವಿಗಳಿಗೆ ರೂ. 1.61 ಕೋಟಿ ಸಹಾಯಧನ ನೀಡಲಾಗಿದೆ.
4. **ಕಿರುಸಾಲ ಯೋಜನೆ** - 240 ಫಲಾನುಭವಿಗಳಿಗೆ ರೂ.0.36 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
5. **ಗಂಗಾ ಕಲ್ಯಾಣ ಯೋಜನೆ** – ರೂ. 1.55 ಕೋಟಿ ವೆಚ್ಚದಲ್ಲಿ 39 ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

## V. ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ

1. **ಸ್ವಯಂ ಉದ್ಯೋಗ (ನೇರ ಸಾಲ)**– 3315 ಫಲಾನುಭವಿಗಳಗೆ ರೂ.32.08 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
2. **ಕಿರುಸಾಲ ಯೋಜನೆ** – 32 ಫಲಾನುಭವಿಗಳಗೆ ರೂ.1.00 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
3. **ಉದ್ಯಮ ಶೀಲತಾ ಯೋಜನೆ**– 1000 ಫಲಾನುಭವಿಗಳಗೆ ರೂ.16.75 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
4. **ಲ್ಯಾಪ್‌ಟಾಪ್ ವಿತರಣಾ ಯೋಜನೆ**– 175 ಫಲಾನುಭವಿಗಳಗೆ ರೂ.1.12 ಕೋಟಿಗಳ ವೆಚ್ಚದಲ್ಲಿ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗಿದೆ.
5. ಕಾಲೋನಿ ಅಭಿವೃದ್ಧಿ ಯೋಜನೆ– 140 ಕಾಮಗಾರಿಗಳನ್ನು ರೂ.14.00 ಕೋಟಿಗಳ ವೆಚ್ಚದಲ್ಲಿ ಕಾಲೋನಿಗಳನ್ನು ಅಭಿವೃದ್ಧಿಗೊಳಸಲಾಗಿದೆ.

## VI. ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ

1. **ಭೂ ಒಡೆತನ** – 5 ಫಲಾನುಭವಿಗಳಗೆ ರೂ.0.72 ಕೋಟಿಗಳ ವೆಚ್ಚದಲ್ಲಿ 7.08 ಎಕರೆ ಜಮೀನನ್ನು ಖರೀದಿಸಿ ನೀಡಲಾಗಿದೆ.
2. **ಸ್ವಯಂ ಉದ್ಯೋಗ (ನೇರ ಸಾಲ)**– 3233 ಫಲಾನುಭವಿಗಳಗೆ ರೂ. 16.16 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
3. **ಉದ್ಯಮ ಶೀಲತಾ ಯೋಜನೆ**–
   - ರೂ.2.00 ಲಕ್ಷ ಸಹಾಯಧನ ಯೋಜನೆಯಡಿ 93 ಫಲಾನುಭವಿಗಳಗೆ ರೂ.1.86 ಕೋಟಿ ಸಹಾಯಧನ ನೀಡಲಾಗಿದೆ.
   - ರೂ.3.50 ಲಕ್ಷ ಸಹಾಯಧನ ಯೋಜನೆಯಡಿ 94 ಫಲಾನುಭವಿಗಳಗೆ ರೂ.3.29 ಕೋಟಿ ಸಹಾಯಧನ ನೀಡಲಾಗಿದೆ.
   - ದ್ವಿಚಕ್ರ ವಾಹನ ಸೌಲಭ್ಯ ಯೋಜನೆಯಡಿ 155 ಫಲಾನುಭವಿಗಳಗೆ ರೂ. 1.08 ಕೋಟಿ ವೆಚ್ಚದಲ್ಲಿ ಸೌಲಭ್ಯ ಒದಗಿಸಲಾಗಿದೆ.

## VII. ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ

ವಿವಿಧ ಅಭಿವೃದ್ಧಿ ಮತ್ತು ವಸತಿ ಕಾರ್ಯಕ್ರಮಗಳಡಿ 3970 ಫಲಾನುಭವಿಗಳಗೆ ಒಟ್ಟು ರೂ.61.96 ಕೋಟಿಗಳ ವೆಚ್ಚದಲ್ಲಿ ಸಾಲ/ಸಹಾಯಧನ ಸೌಲಭ್ಯ ಒದಗಿಸಲಾಗಿದೆ.

1. **ಕೌಶಲ್ಯಾಭಿವೃದ್ಧಿ ತರಬೇತಿ**: 1850 ಅಭ್ಯರ್ಥಿಗಳಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ರೂ.5.21 ಕೋಟಿಗಳ ವೆಚ್ಚದಲ್ಲಿ ನೀಡಲಾಗಿದೆ.
2. **ಚರ್ಮ ಶಿಲ್ಪ ಯೋಜನೆ**: 20 ಫಲಾನುಭವಿಗಳಗೆ ರೂ.1.00 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
3. **ಸ್ವಾವಲಂಬಿ/ಸಂಚಾರಿ ಮಾರಾಟ ಮಳಗೆ**: 200 ಫಲಾನುಭವಿಗಳಗೆ ರೂ.5.00 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.

4. **ಮಹಿಳಾ ಕುಶಲ ಕರ್ಮಿಗಳಿಗೆ ಕಾಯಕ ಸ್ಪೂರ್ತಿ ಯೋಜನೆ:** 400 ಫಲಾನುಭವಿಗಳಿಗೆ ರೂ.1.00 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.

5. **ಪಾದುಕೆ ಕುಟಿರ ಯೋಜನೆ:** 300 ಫಲಾನುಭವಿಗಳಿಗೆ ರೂ.3.75 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.

6. **ಚರ್ಮಕಾರರಿಗೆ ನೇರ ಸಾಲ ಯೋಜನೆ:** 600 ಫಲಾನುಭವಿಗಳಿಗೆ ರೂ.6.00 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.

7. **ಮಾರುಕಟ್ಟೆ ಸಹಾಯ ಯೋಜನೆ:** 100 ಕುಶಲಕರ್ಮಿಗಳ ಉತ್ಪನ್ನಗಳಿಗೆ ರೂ.1.74 ಕೋಟಿಗಳ ವೆಚ್ಚದಲ್ಲಿ ರಿಯಾಯಿತಿ ನೀಡಲಾಗಿದೆ.

8. **ಚರ್ಮಕಾರರ ವಸತಿ ಯೋಜನೆ:** 500 ಫಲಾನುಭವಿಗಳಿಗೆ ರೂ.11.00 ಕೋಟಿಗಳ ವೆಚ್ಚದಲ್ಲಿ ವಸತಿ ಸೌಲಭ್ಯ ಒದಗಿಸಲಾಗಿದೆ.

9. **ಪ್ರಗತಿ ಆಡ್ಕರ್ ಕಾಲೋನಿ ಅಭಿವೃದ್ಧಿ:** 8 ಕಾಲೋನಿಗಳಿಗೆ ರೂ.10.41 ಕೋಟಿಗಳ ವೆಚ್ಚದಲ್ಲಿ ಮೂಲಭೂತ ಸೌಲಭ್ಯ ಒದಗಿಸಲಾಗಿದೆ.

10. **ವಸ್ತು ಪ್ರದರ್ಶನ ಮತ್ತು ಮಾರಾಟ:** 5 ಕಾರ್ಯಕ್ರಮಗಳನ್ನು ರೂ.5.47 ಕೋಟಿ ವೆಚ್ಚದಲ್ಲಿ ಆಯೋಜಿಸಲಾಗಿದೆ.

## VIII. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ

1. **ಗಂಗಾ ಕಲ್ಯಾಣ ಯೋಜನೆ** – ರೂ.134.85 ಕೋಟಿ ವೆಚ್ಚದಲ್ಲಿ 2862 ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.
2. **ಭೂ ಒಡೆತನ – 433** ಫಲಾನುಭವಿಗಳಿಗೆ ರೂ.48.09 ಕೋಟಿಗಳ ವೆಚ್ಚದಲ್ಲಿ ಜಮೀನನ್ನು ಖರೀದಿಸಿ ನೀಡಲಾಗಿದೆ.
3. **ಸ್ವಯಂ ಉದ್ಯೋಗ (ನೇರ ಸಾಲ)**– 5714 ಫಲಾನುಭವಿಗಳಿಗೆ ರೂ.69.43 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
4. **ಕಿರುಸಾಲ ಯೋಜನೆ** – 3070 ಫಲಾನುಭವಿಗಳಿಗೆ ರೂ.7.67 ಕೋಟಿಗಳ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗಿದೆ.
5. ಪ.ಪಂಗಡದ ಅರಣ್ಯ ಆಧಾರಿತ ಆದಿವಾಸಿ ಮತ್ತು ಅಲೆಮಾರಿ/ಅರೆ ಅಲೆಮಾರಿ ಸಮುದಾಯದ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಬುಡಕಟ್ಟು ಜನಾಂಗದವರ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಡಿ 150 ಫಲಾನುಭವಿಗಳಿಗೆ ರೂ.2.02 ಕೋಟಿ ವೆಚ್ಚದಲ್ಲಿ ಸೌಲಭ್ಯ ಒದಗಿಸಲಾಗಿದೆ.

*******